(f) the Chancellor may, In consultation with the Vice-Chancellor of the Karnataka University and the Mysore University determined the excess teaching ministerial and other staff, if any, in these Universities and transfer the staff so in excess to the Gulbarga University of the Mangalore University, as the case may be, after following such principels and procedure as he may consider appropriate ;

**73. Vice-Chancellor to take necessary action for selection, appointment, nomination and co-option of members to the Senate, Syndicate and the Academic Council.**--The Vice-Chancellor shall take necessary action for elections being held, appointments, nomination and co-options being made under this Act so that the Senate, the Syndicate, the Academic Council and other authorities shall come into existence not later than two years from the appointment date and in the case of Universities established under sub-section (IA) of section 3 not later than one year from the date of commencement of the amendment Act,

xx xx xx

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

(ಅ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

೧೯೮೭ನೇ ಇಸವಿಯ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು ಜೂಜುಕೋರರು, ಗೂಂಡಾಗಳು, ಆನೈತಿಕ ಅಪರಾಧಿಗಳು, ಕೊಳಗೇರಿಗಳನ್ನು ಪಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕ.

(ಪರ್ಯಾಲೋಚನಾ ಪ್ರಸ್ತಾವ ಮುಂದುವರಿದ ಚರ್ಚೆ)

ಶ್ರೀ ಕೆ. ಬಿ. ಕೋಳಿವಾಡ್ (ರಾಣೆಬೆನ್ನೂರು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಕಳ್ಳಬಟ್ಟಿದಾರರು, ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಆನೈತಿಕ ಅಪರಾಧಿಗಳು, ಕೊಳಗೇರಿಗಳನ್ನು ಪಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕವನ್ನು ವಿರೋಧಿಸುತ್ತಾ, ನಾಲ್ಕು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ.

ಇತ್ತೀಚೆಗೆ ಅನೇಕ ಕಾನೂನು ತಜ್ಞರ ಲೇಖನಗಳನ್ನು ಮತ್ತು ಕಾನೂನು ತಜ್ಞರ ಅಭಿಪ್ರಾಯವನ್ನು ನಾವು ನೋಡಿದಾಗ, ನಮ್ಮ ರಾಜ್ಯದಲ್ಲಿ ಈಗಾಗಲೇ ಅನೇಕ ಕಾನೂನುಗಳು ಬರುತ್ತಿವೆ ಎಂಬುದು ಗೊತ್ತಾಗುತ್ತದೆ. ಕಾನೂನುಗಳ ಸಂಖ್ಯೆ ಬೆಳೆಯುತ್ತಾ ಹೋಗುತ್ತಿದೆ. ಈ ಕಾನೂನುಗಳು ಯಾವ ರೀತಿಯಾಗಿ ಉಪಯೋಗವಾಗುತ್ತಿವೆ, ಕಾರ್ಯಾನ್ವಯವಾಗುತ್ತಿವೆ ಎಂಬುದನ್ನು ನೋಡಿದರೆ, ಬಹಳ ವಿಷಾದವಾಗುತ್ತದೆ. ಯಾವುದೇ ಒಂದು ಕಾನೂನನ್ನು ಮಾಡಬೇಕಾದಾಗ, ಆ ಕಾನೂನು ಪರಿಣಾಮಕಾರಿಯಾಗಿ ಏನಾಗುತ್ತದೆ ಎಂಬುದನ್ನು ಸಂಪೂರ್ಣವಾಗಿ ಮನಸ್ಸಿನಲ್ಲಿ ಇಟ್ಟುಕೊಂಡು, ನಾವು ಕಾನೂನು ಮಾಡಬೇಕಾಗುತ್ತದೆ. ಇಪತ್ತು ಸೆಕ್ಷನ್ ೬(ಎ) ತಿದ್ದುಪಡಿಯನ್ನು ನೋಡಿದರೆ, ಇದು ಸಂಪೂರ್ಣವಾಗಿ ಜುಡಿಷಿಯಸ್ ಆಗಿಲ್ಲ. ನಾವು ಇಲ್ಲಿ ಗೂಂಡಾಗಳು, ಔಷಧ ಅಪರಾಧಿಗಳು, ಜೂಜುಕೋರರನ್ನು ಬೆಂಬಲಿಸುವುದಕ್ಕೆ ಹೊರಟಿಲ್ಲ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಯಾರೋ ೧೦ ಜನ ಗೂಂಡಾಗಳನ್ನು ಶಿಕ್ಷಿಸದೇ ಹೋದರೂ ಅಡ್ಡಿ ಇಲ್ಲ. ಆದರೆ ಒಬ್ಬ ನಿರಪರಾಧಿಯನ್ನು ಶಿಕ್ಷಿಸುವುದು ತಪ್ಪು ಎಂಬ ನಮ್ಮ ಮೂಲ ತತ್ವವನ್ನು ತಿಳಿದುಕೊಳ್ಳಬೇಕು. ಮಾನವನ ಮೂಲಭೂತ ಹಕ್ಕನ್ನು ಮೊಟಕುಗೊಳಿಸುವ ಕಾನೂನನ್ನು ತರುವುದಕ್ಕೆ ಇವತ್ತು ಹೊರಟಿದ್ದೇವೆ. ನಿರಪರಾಧಿ ವ್ಯಕ್ತಿಯನ್ನು ಯಾವುದೇ ಕಾರಣವಿಲ್ಲದೆ, ಅವನ ಸ್ವಾತಂತ್ರ್ಯವನ್ನು ಹರಣ ಮಾಡಬೇಕಾದರೆ, ಪ್ರಜಾಪ್ರಭುತ್ವದಲ್ಲಿ ಅಂತಹ ವ್ಯಕ್ತಿ ಇರುವುದಕ್ಕೆ ಯೋಗ್ಯವೇ? ಅಥವಾ ಇಂತಹ ಕಾನೂನು, ಶಾಸಕರು ಮಾಡತಕ್ಕಂಥ ಕಾನೂನೇ ಎನ್ನುವುದನ್ನು ನಾವು ವಿಚಾರ ಮಾಡ ಬೇಕಾಗಿದೆ. ಈ ತಿದ್ದುಪಡಿ ಪ್ರಕಾರ, ಒಂದುವೇಳೆ ಗ್ರೌಂಡ್ಸ್ ಹೇಗಿದ್ದರೂ ಅಡ್ಡಿ ಇಲ್ಲ. Non-existent, not relevant ಅಥವಾ ಯಾವುದೇ ಕಾರಣದಿಂದಲೂ ಇನ್‌ವ್ಯಾಲಿಡ್ ಆಗಬಾರದು ಎಂದು ಈ ಮಸೂದೆಯನ್ನು ತಂದು ಪಾಸ್ ಮಾಡುವುದಕ್ಕೆ ಪ್ರಯತ್ನ ಮಾಡು ತ್ತಿದ್ದಾರೆ. ಇವತ್ತು ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಮಾನ್ಯ ರಾಚಯ್ಯನವರು ಇದ್ದಂಥ ವೇಳೆಯಲ್ಲಿ ಇಂತಹ ಕಾನೂನು ಆಗಬಾರದು. ಇದು ರಾಜಕೀಯ ದುರುದ್ದೇಶದಿಂದ ಒಬ್ಬ ನಿರಪರಾಧಿಯ ಸ್ವಾತಂತ್ರ್ಯವನ್ನು ಹರಣ ಮಾಡತಕ್ಕದ್ದು ಹಾಗೂ ಆತನ ಹಕ್ಕನ್ನು ಮೊಟಕು ಮಾಡ ತಕ್ಕದ್ದಾಗಿದೆ. ಇದು ನಿಜವಾಗಿಯೂ ಕೋಚನೀಯವಾದುದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ನಾವು ಮಾಡತಕ್ಕಂಥ ಕಾನೂನು ಹೇಗಿದೆ ಎನ್ನುವುದನ್ನು ರಾಜ್ಯದ ಜನತೆ ಹಾಗೂ ಅನೇಕ ಕಾನೂನು ತಜ್ಞರು ನೋಡುತ್ತಿರುತ್ತಾರೆ. ಜುಡಿಷಿಯಸ್ ಆಗಿ ನೋಡಿದರೆ, ಲೆಜಿಸ್ಲೇಟರ್ಸ್ ಈ ರೀತಿ ಮಾಡಿದರೆ, ನಮ್ಮ ಶಾಸಕರು ಯಾಪ ಪುಟ್ಟಕ್ಕೆ ಹೋಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಇದರಿಂದ..... ನಮ್ಮ ಅಲ್ಪತನವನ್ನು, ನಮ್ಮ ಅಜ್ಞಾನವನ್ನು ನಾವು ಪ್ರದರ್ಶಿಸಿದ ಹಾಗೆ ಆಗುತ್ತದೆ, ಎಂಬ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಒಬ್ಬ ಗೂಂಡಾ ಇರಬಹುದು, ಅವನು ಗೂಂಡಾ ಇದ್ದಾನೋ ಇಲ್ಲವೋ ಎಂಬುದನ್ನು ನಿಶ್ಚಿತ ಮಾಡತಕ್ಕ ಒಂದು ಹಕ್ಕು ಇರಬೇಕು. ಈ ತಿದ್ದುಪಡಿಯನ್ನು ತರಲು ಉದ್ದೇಶ ಏನು ಕೊಟ್ಟಿದ್ದಾರೆ, ಇದರಲ್ಲಿ ಲೀಗಲ್ ಲಾಕ್ಯೂನಾ ಇದೆ. ಡೇಟ್ ವಗೈರೆ ತಪ್ಪಾಗಿದ್ದುದರಿಂದ ಕೋರ್ಟ್‌ಗಳಲ್ಲಿ ಇವರ ಬಿಡುಗಡೆಯಾಗಿದೆ ಎಂಬುದಾಗಿ ಇವರು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಕೊಟ್ಟಿದ್ದಾರೆ. ಕೇವಲ ೨೫ ಕೇಸ್‌ಗಳಲ್ಲಿ ೧೫ ಕೇಸ್‌ಗಳನ್ನು ರಾಜ್ಯ ಸರಕಾರದವರೇ ಬಿಟ್ಟು ಬಿಟ್ಟಿದ್ದಾರೆ. ಹೈಕೋರ್ಟ್‌ನಲ್ಲಿ ಕೇವಲ ಎರಡು ಕೇಸ್ ಇದೆ ಎಂಬ ಮಾತನ್ನು ಕೇಳಿದಾಗ ಇದು ಕೇವಲ ರಾಜಕೀಯ ದುರುಪಯೋಗ ವಾಗುತ್ತದೆ ಎಂಬ ಮಾತನ್ನು ಹೇಳಿ, ಸರಕಾರಕ್ಕೆ ತಮ್ಮ ಮೂಲಕ ಎಚ್ಚರಿಕೆ ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಮಾನವನ ಮೂಲಭೂತ ಹಕ್ಕಾದ ಸ್ವಾತಂತ್ರ್ಯವನ್ನು ಮೊಟಕುಗಳಿಸದಹಾಗೆ ಬಹಳ ಎಚ್ಚರಿಕೆಯಿಂದ ನೀವು ಈ ಕಾನೂನನ್ನು ಉಪಯೋಗಿಸಬೇಕೇ ಹೊರತಾಗಿ ಆರ್ಬಿಟ್ರರಿಯಾಗಿ ಇಂತಹ ಕಾನೂನನ್ನು ಮಾಡಬಾರದು. ಡಿಸ್ಕ್ರಿಷನ್ ಪವರ್ ಇದ್ದರೂ ಕೂಡಾ the discretionary power must be used judiciously. ಜ್ಯುಡಿಶಿಯಸ್ ಡಿಸ್ಕ್ರಿಷನ್ ಇರಬೇಕೇ ಹೊರತಾಗಿ, ಆರ್ಬಿಟ್ರರಿಯಾಗಿ ಒಂದು ಕಾನೂನನ್ನು ಮಾಡಿ, ಒಂದು ವೇಳೆ ಕೊಟ್ಟಿದ್ದೇ ಆದರೆ ಮುಂದೆ ಅನೇಕ ಗಂಡಾಂತರಗಳನ್ನು ಅದರಿಂದ ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಿ, ಇದನ್ನು ಸಂಪೂರ್ಣ ವಿರೋಧಿಸಿ ನನ್ನ ಮಾತನ್ನು ಮುಗಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲ್).—ಮಾನ್ಯ ಅಧ್ಯಕ್ಷರೇ, ಈ ಗೂಂಡಾ ಆಕ್ಟ್‌ನ್ನು ಎನಾಕ್ಟ್ ಮಾಡಿದಾಗಲೇ ನಾವು ಹೇಳಿದ್ದೆವು ಇದು ಅಕ್ಕರೆಯಲ್ಲ ಎಂದು. ಮಾನ್ಯ ರಾಚಯ್ಯನವರಿಗೂ ಕೂಡಾ ಇದು ಗೊತ್ತು. ಸಿ.ಆರ್.ಪಿ.ಸಿ. ೧೦೭ ನಲ್ಲಿ ಪ್ರೊಸೀಡಿಂಗ್ಸ್ ತೆಗೆದು ಕೊಂಡಾಗ ಕೆಲವು ಪ್ರಾಬ್ಲಂಸ್ ಬರುತ್ತದೆ. ಸಿ.ಆರ್.ಪಿ.ಸಿ. ೧೧೦ ನ್ನು ತಮಗೆ ಗೊತ್ತಿದ್ದ ಹಾಗೆ ಅಮೆಂಡ್‌ಮೆಂಟ್ ಮಾಡಿರುತ್ತಾರೆ. ಒಂದು ವೇಳೆ ಅವನು ಪ್ರೊಫೆಷನಲ್ ಗೂಂಡಾ ಆಗಿದ್ದ ಎಂದು ಹೇಳಿದರೆ ಅವನನ್ನು ಡಿಟ್ರೈನ್ ಮಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಇವರು ಆದನ್ನೇ ಪುನಃ ಪರಿವರ್ತನೆ ಮಾಡಿ ಒಂದು ಆಕ್ಟ್‌ನ್ನು ತಂದಿದ್ದಾರೆ, ನಮಗೆ ಬಹಳ ಪವರ್ಸ್ ಬೇಕಾಗುತ್ತದೆ, ಆ ಪವರ್ಸ್ ಉಪಯೋಗ ಮಾಡಿಕೊಂಡು ನಾವು ಕಂಟ್ರೊಲ್ ಮಾಡುವುದಕ್ಕೆ ಸಾಧ್ಯ ಉಂಟು ಎಂದು ಇದನ್ನು ತಂದಿದ್ದಾರೆ. ಸ್ವಾಮಿ ತಾವೂ ಲಾಯರ್ ಆಗಿದ್ದವರು, ಮಾನ್ಯ ರಾಚಯ್ಯನವರೂ ಲಾಯರ್ ಆಗಿ ಪ್ರ್ಯಾಕ್ಟೀಸ್ ಮಾಡಿದವರು, ಇದೊಂದು ನೋಡಿದರೆ ನಿಜವಾಗಿಯೂ ನಾಚಿಕೆಯಾಗು ತ್ತದೆ. ಹೈಕೋರ್ಟ್‌ನವರು ಅಬ್ಜೆಕ್ಷನ್ಸ್ ಮಾಡಿರುತ್ತಾರೆ, ಆದುದರಿಂದ ಇದನ್ನು ಓವರ್ ಕಮ್ ಮಾಡುವುದಕ್ಕೆ ತಾವು ಒಂದು ಆಕ್ಟ್ ತಂದಿದ್ದೀರಿ. ಹೈಕೋರ್ಟಿನವರ ಅಬ್‌ಸರ್ವೇಷನ್ಸ್ ಏನು ತಾವು ಓದಿದರೆ ಸಾಕು. ಈಗ ತಾವು ೭ (ಎ) ಗೆ ಅಮೆಂಡ್‌ಮೆಂಟ್ ತಂದಿದ್ದೀರಿ.

Grounds of detention servable

6 (A) (a) such order shall not be deemed to be invalid or inoperative merely because one or some of the grounds is orare—
i) Vauge

ಇವರಿಗೆ ಮೆಷಿನರಿ ಇಲ್ಲವೇ ಅಡ್ಮಿನಿಸ್ಟ್ರೇಟೀವ್ ಮೆಷಿನರಿ ಇಲ್ಲವೇ, ಇಲ್ಲಿ ವೇಗ್ ಆರ್ಡರ್ಸ್ ಕೊಡಬೇಡಿ ಡೆಫಿನೆಟ್ ಆಗಿ ನೋಡಿ ಅರೆಸ್ಟ್ ಮಾಡಿ. You have committed such and such mistake on such and such date which amounts to goondaism ಎಂದು ಹೇಳಬೇಕು. Next non-existent ಇದಕ್ಕಿಂತ ಅಪಮಾನಕರವಾದುದು ಮತ್ತೊಂದು ಇಲ್ಲ such order shall not be deemed to be invalid or inoperative merely because one or some or the grounds is or are,-(i) vague ; (ii) non-existent ; (iii) not relevant ; (iv) not connected or not proximately connected with such person ಇವರು ಹೇಳುವುದು ನಾಲ್ಕು ಗ್ರೌಂಡ್ಸ್. ಇದಕ್ಕೂ ಕೂಡಾ ನನಗನ್ನಿಸುತ್ತದೆ, ಪೋಲೀಸರು ಅಂತಹ ವ್ಯಕ್ತಿಗಳಿಗೆ ಒಂದು ನೋಟೀಸ್ ಕೊಡುವಾಗ; ಕೋರ್ಟ್‌ನಲ್ಲಿ ಕೇಸ್ ಹಾಕುವಾಗ, ಡಿಟೆನ್‌ಷನ್ ಆರ್ಡರ್ ಬರೆದುಕೊಡುವಾಗ, ಅದು ವೇಗ್, ನಾನ್ ಎಕ್ಸಿಸ್ಟೆಂಟ್ ಇದ್ದಿರೂ ಕೂಡಾ ನಿಮ್ಮ ಡಿಸ್ಕ್ರಿಪ್ಷ್ಯಾಜಿಸ್ಪ್ರೇಟ್ ಪತ್ತಿರ, ಇದನ್ನು ಓವರ್ ಕಮ್ ಮಾಡಬೇಕೆಂದು ಸರಿಯಾಗಿದೆ ಎಂದು ಹೇಳುತ್ತಾರೆ. such order shall not be deemed to be invalid or inoperative merely because one or some of the grounds is or are;—(i) vague; (ii) non-existent; (iii) not relevant (iv) not connected or not proximately connected with such person. ಎಂದು ನೀವು ಇಲ್ಲಿ ಹೇಳಿದ್ದೀರಿ. ನಾನು ಹೇಳುವುದು ನಿಜಕ್ಕೂ ಕೂಡಾ ಕಾಮನ್‌ಸೆನ್ಸ್ ಅಪ್ರೋಚ್ ಇರಬೇಕು. ಈ ಆರ್ಡರ್‌ನ್ನು ಗೂಂಡಾಗಳನ್ನು ಡೀಟೇನ್ ಮಾಡಬೇಕೆಂದು ಆಫೀಸರ್ಸ್‌ಗೆ ಕೊಡುತ್ತೀರಿ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಇದನ್ನು ಮಾಡುತ್ತಾರೆ. ಆದರೆ High Court says dont make it a vague order. Let it be a speaking order. You should not arrest on non-existent or not relevant grounds. There should be relevant to arrest and detention. ಗೂಂಡಾಸ್ ಎಂದು ಹೇಳಬೇಕಾದರೆ ರೀಸನ್ ಇರಬೇಕು. ನಾನು ಎಕ್ಸಿಸ್ಟೆಂಟ್ ರೀಸನ್ಸ್ ಮೇಲೆ ಯಾರನ್ನೂ ಅರೆಸ್ಟ್ ಮಾಡಬಾರದು ರಿಲವೆನ್ಸ್ ಇರಬೇಕು. ಅರೆಸ್ಟ್‌ಗೆ ಡಿಟೆನ್‌ಷನ್‌ಗೆ ರಿಲವೆನ್ಸ್ ಇರಬೇಕು, ಏತಕ್ಕೆ ಡೀಟ್ರೇನ್ ಮಾಡುತ್ತೇವೆ ಎಂಬುದಕ್ಕೆ ರಿಲವೆನ್ಸ್ ಇರಬೇಕು. ಇದನ್ನು ಇನ್ನೂ ಸ್ಪಷ್ಟವಾಗಿ ಹೇಳುತ್ತಾರೆ. it should be proximately connected to the crime you allege ಇಷ್ಟು ಹೇಳಿದರೂ ಇದು ಕೂಡಾ ಇರಬಾರದು ಎಂದರೆ ನಾವು ಎಮರ್ಜೆನ್ಸಿ ಕಾಲದಲ್ಲೂ ಕೂಡ ಸುಮ್ಮನೆ ಅರೆಸ್ಟ್ ಮಾಡಿದರೂ, ನಿಜವಾಗಿ ಯಾರನ್ನೂ ಕೂಡಾ ಡೀಟೈನ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿಬಿಡುತ್ತಿದ್ದರು.

ಆವರು ಏನು ಹೇಳಿಕೊಂಡಿದ್ದಾರೆಂದು ತಾವೇ ಸ್ವಲ್ಪ ದಯಮಾಡಿ ಓದಿ ನೋಡಿ. ನಿಮ್ಮ ತಿದ್ದುಪಡಿಯ ಕೊನೆಯ ಭಾಗದಲ್ಲಿ ಈ ರೀತಿ ಇದೆ.

**Explanatory statement**

"The state Government has experienced some prcedural difficulty to sustain the detention orders in certain cases which were challenged before the High Court on technical grounds such as error in the date ,,

ಡೇಟ್ ಸರಿಯಾಗಿ ಹಾಕಲಿಲ್ಲವೆನ್ನುವ ಒಂದೇ ಒಂದು ಕಾರಣಕ್ಕಾಗಿ ಇಂತಹ ಒಂದು ತಿದ್ದುಪಡಿಯನ್ನು ತರುವಂತಹ ಆವಶ್ಯಕತೆ ಇರಲಿಲ್ಲ. ಒಬ್ಬ ಒಂದು ಕ್ರೈಮ್ ಅನ್ನು 15ನೇ ತಾರೀಖು ಮಾಡಿರುತ್ತಾನೆ.

ಆದನ್ನು ಪೋಲೀಸ್ ಆಫೀಸರ್ ೨೦ನೇ ತಾರೀಖು ರೇಕಾರ್ಡ್ ಮಾಡಿರುತ್ತಾನೆ. ಅದು ಪೋಲೀಸ್ ಆಫೀಸರ್ಸ್ ಇರ್ರೆಫ್ಯಾಸಿಬಿಲಿ. ಅಂತಹವರ ಮೇಲೆ ಬೇಕಾದರೆ ತಾವು ಕ್ರಮ ತೆಗೆದುಕೊಳ್ಳಬಹುದು ಅದು ಬಿಟ್ಟು ಇದೇ ಕಾರಣಕ್ಕೆ ಒಂದು ತಿದ್ದುಪಡಿ ತರುವಂತಹ ಅಗತ್ಯವಿರಲಿಲ್ಲ.ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ಬೂಟ್‌ಲೆಗ್ಗರ್ಸ್ ಇಲ್ಲ? ಎಷ್ಟು ಜನ ಗ್ಯಾಂಬ್ಲರ್ಸ್ ಇಲ್ಲ? ಆದರೆ ಈ ಒಂದು ಆಕ್ಟ್ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೬ಜನರನ್ನು ಮಾತ್ರ ಅರೆಸ್ಟ್ ಮಾಡಿದ್ದೀರಿ. ಇವರಲ್ಲಿ ಸುಮಾರು ೧೬ಜನರನ್ನು ತಾವೇ ಬಿಟ್ಟಿದ್ದೀರಿ. ಸಲಹಾಸಮಿತಿಯವರು ೪ಜನರನ್ನು ಬಿಟ್ಟಿದ್ದಾರೆ.ಇನ್ನು ಸ್ಥಾನದಲ್ಲಿರುವವರು ಕೇವಲ ಇಬ್ಬರು ಮಾತ್ರ. ಇದು ಮಾನ್ಯ ರಾಜಪಯ್ಯನವರಿಗೂ ಸಹ ಗೊತ್ತಿರತಕ್ಕಂಥ ವಿಚಾರ. ಗೂಂಡಾಗಳು ಎಲ್ಲೆಲ್ಲಿ ಇದ್ದಾರೆ. ಏನು ಮಾಡುತ್ತಾರೆ ಎನ್ನುವ ವಿಚಾರ ನಮಗೂ ಗೊತ್ತು. ನಿಮಗೂ ಗೊತ್ತು, ಪೋಲೀಸಿನವರಿಗೆ ನಮಗಿಂತ ಚೆನ್ನಾಗಿ ಗೊತ್ತು. ಆದರು ಸಹ ಯಶಸ್ವಿಯಾಗಿಲ್ಲ, ಗೂಂಡಾಗಳು ಪೋಲೀಸಿನವರ ಕೈ ತಪ್ಪಿ ಹೋಗಿದ್ದಾರೆ. ಅವರಿನ್ನು ಪೋಲೀಸಿನವರು ಕಂಟ್ರೋಲ್ ಮಾಡುವುದಕ್ಕೆ ಆಗಿಲ್ಲ. ಪೋಲೀಸ್‌ಠಾಣೆಗೆ ಬಂದೆ ಗೂಂಡಾಗಳನ್ನು ಪೋಲೀಸಿನವರೇ ಅವರ ಮಾಮೂಲಿಯನ್ನು ವಸೂಲು ಮಾಡಿಕೊಂಡು ಬಿಟ್ಟರೆ ಇನ್ನು ಗೂಂಡಾಗಳು ಅವರ ಕಂಟ್ರೋಲ್‌ಗೆ ಹೇಗೆ ಬರುವುದಕ್ಕೆ ಸಾಧ್ಯ? ಈಗ ನಮ್ಮ ಜಿಲ್ಲೆಯಲ್ಲಿ ಯಾರ್ಯಾರು ಗೂಂಡಾಗಳು ಇದ್ದಾರೆ ಎನ್ನುವುದು ನವುಗೆಲ್ಲಾ ಚೆನ್ನಾಗಿ ಗೊತ್ತಿರುತ್ತದೆ. ಜೊತೆಗೆ ನಮಗಿಂತ ಚೆನ್ನಾಗಿ ಎಕ್ಸೈಜ್‌ನವರಿಗೆ ಗೊತ್ತು. ಅವರೇನ ಮಾಡುತ್ತಾರೆಂದರೆ ಅವರಿಗೆ ಯಾರು ಮಾಮೂಲಿ ಕೊಡುತ್ತಾರೋ ಅವರನ್ನು ಬಿಟ್ಟು ಮಾಮೂಲಿ ಯಾರು ಕೊಡುವುದಿಲ್ಲವೋ ಅಂತಹವರನ್ನು ಹಿಡಿದು ಕೊಡುತ್ತಾರೆ. ಸರ್ಕಸ್ಸ್ ಟ್ರ್ಯಾಜಡಿಯಲ್ಲಿ ಸಾವಿರಾರು ಜನ ಸತ್ತರು. ಆ ಟ್ರ್ಯಾಜಡಿಗೆ ಸಂಬಂಧಪಟ್ಟ ಶ್ರೀ ಅಮೀರಸುಲ್ತಾನ್ ರಾಜಾರೋಷವಾಗಿ ಓಡಾಡುತ್ತಿದ್ದಾರೆ. ಅವನನ್ನು ಮುಟ್ಟುವವರೇ ಇಲ್ಲ. ಆದೇ ಇನ್ನೂ ಎಷ್ಟೋ ಜನ ಇದ್ದಾರೆ. ತಾವು ಈಗ ಗೂಂಡಾ ಆಕ್ಟ್ ಮೇಲೆ ಕೇವಲ ಇಬ್ಬರನ್ನು ಮಾತ್ರ ಬಂಧಿಸಿದ್ದೀರಿ. ಇದಕ್ಕೆ ಒಂದು ತಿದ್ದುಪಡಿ ತರಬೇಕೆ? ಇದರ ಆವಶ್ಯಕತೆ ಇತ್ತೆ? ಇದರಿಂದ ನಿಜವಾಗಿಯೂ ಪೋಲೀಸ್ ಆಫೀಸರ್ಸ್ ದಕ್ಷತೆಗೆ ಚ್ಯುತಿ ಬಂದಂತೆ ಆಗುತ್ತದೆ. ಹೈಕೋರ್ಟಿಗೆ ಅಪಮಾನ ಮಾಡಿದಂತಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಕೇವಲ ಈ ಒಂದು ಗೂಂಡಾ ಆಕ್ಟಿನಲ್ಲಿ ೨೬ ಜನರನ್ನು ಮಾತ್ರ ಅರೆಸ್ಟ್ ಮಾಡಿದ್ದೀರಿ. ಇದಕ್ಕೆ ಸ್ಪಷ್ಟವಾದ ವಿವರಣೆ ಕೊಡಬೇಕಾಗಿತ್ತು.ಅದನ್ನು ಸಹ ಕೊಡಲಿಲ್ಲ. ಈಗ ೧೦೭ನೇ ಪ್ರೊವಿಡಿಂಗ್ಸ್ ಇರುವುದು ರಾಜ್ಯದ ಲಾ ಆಂಡ್ ಆರ್ಡರ್ ಕಂಟ್ರೋಲ್ ಮಾಡುವುದಕ್ಕೆ ಅದರೂ ಲಾ ಆಂಡ್ ಆರ್ಡರ್ ಕಂಟ್ರೋಲ್ ಆಗಿಲ್ಲವೆಂದು ಇದುವರೆವಿಗೂ ಮಾತನಾಡಿದ ನಮ್ಮ ಆನೇಕ ಜನ ಮಾನ್ಯ ಸದಸ್ಯರು ಹೇಳಿದರು. ಇವತ್ತು ಕರ್ನಾಟಕ ರಾಜ್ಯದಲ್ಲಿ ವ್ಯಾಪಕವಾಗಿ ಡಕಾಯಿತಿ ನಡೆಯುತ್ತಿವೆ. ಇವುರಾಬರಿಗಳು ನಡೆಯುತ್ತಿವೆ ದಿನೇ ದಿನೇ ಜಾಸ್ತಿಯಾಗುತ್ತಿವೆ.ಪೋಲೀಸಿನವರ ಕಂಟ್ರೋಲ್‌ಗೆ ಬರುತ್ತಿಲ್ಲ.ಇಂತಹ ಒಂದು ಪರಿಸ್ಥಿತ್ತಿಇದ್ದರೂ ಸಹ ನೀವು ಈ ಆಕ್ಟ್ ಅನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ.ಮಾನ್ಯ ಸಚಿವರಾದಂಥಶ್ರೀ ಮಾನ್ ರಾಜಯ್ಯನವರನ್ನು ನಾನುಒಂದುಪ್ರಶ್ನೆ ಕೇಳುತ್ತೇನೆ. ಆದೇನೆಂದರೆ ತಾವೀಗ ಸುಮಾರೊಂದು ಸಾವಿರಕೇಸ್‌ಗಳನ್ನು ಹಾಕಿದ್ದೀರಿ. ಇದರಲ್ಲಿ ೧೦೭ರ ಪ್ರೊವಿಡಿಂಗ್ಸ್ ವೇಗ್ ಆಗಿದೆಯಾತ್ತು ನಾನ್‌ಎಸ್ಸ್‌ಟೆಂಟ್ ಎಂದು ಒಡೆದು ಹಾಕಿರುವುದು ಕೇವಲ ೪-೫ ಕೇಸ್‌ಗಳಲ್ಲಿ.ಇದಕ್ಕೆ ಹೈಕೋರ್ಟಿನವರು ಒಂದು ಸ್ಪ್ರಿಂಕ್ಲರ್ ಪಾಸ್ ಮಾಡಿದುದರಿಂದ ಈ ತಿದ್ದುಪಡಿ ತರುವ ಅವಶ್ಯಕತೆ ಇರಲಿಲ್ಲ. ಅದು ಹೈಕೋರ್ಟಿಗೆ ಅಪಮಾನ ಮಾಡಿದಂತೆ. ಇದನು ಮಾನ್ಯ ಗೃಹಸಚಿವರು ಯೋಚನೆ ಮಾಡಬೇಕು. ಇಲ್ಲಿ ಸ್ಪಷ್ಟವಾದ ಮಾಹಿತಿಯನ್ನು ಕೊಡಬೆಕಾಗುತ್ತಿತ್ತು. ಪೋಲೀಸ್ ಆಫೀಸರ್ ವೇಗ್ ಆಗಿ ನಾನ್ ಎಕ್ಸಿಟೆಂಟ್ ಮಾಡಿ ಸಂಬಂಧವಿಲ್ಲದೆ ವಿಷಯಗಳನ್ನು ತಿಳಿಸಿದರೆ ಅದು ಅನ್ಯಾಯವಾಗುತ್ತದೆ. ಇದು ಕಾನ್ಸ್ಟಿಟ್ಯೂಷನ್‌ಗೆ ವಿರೋಧವಾಗಿದೆ. ಅಂಥಾದ್ದನ್ನು ಇವರು ಕಂಟ್ರೋಲ್ ಮಾಡುವುದನ್ನು ಬಿಟ್ಟು ಆದಕ್ಕೆ ಇನ್ನೊಂದು ಅಮೆಂಡ್‌ಮೆಂಟ್‌ನ್ನು ತಂದುಬಿಟ್ಟಿದಾರೆ. ಇದರಿಂದ ಏನಾಗುತ್ತದೆ ಎಂದರೆ. ಪೋಲೀಸಿನವರು ಯಾರನ್ನು ಬೇಕಾದರೂ ಕಾರಣವಿಲ್ಲದೆ ಜೈಲಿಗೆ ಹಾಕಿ ತೊಂದರೆ ಕೊಡಬಹುದು. ಇಂತಹ ಅಧಿಕಾರವನ್ನು ಕೊಡುವ ಕಳ್ಳ ಕಾನೂನು ಇದಾಗಿದೆ. ಕರ್ನಾಟಕದಲ್ಲಿ ಗ್ಯಾಂಬ್ಲರ್ಸ್‌ಗೆ ಕಡಿಮೆ ಏನಿಲ್ಲ. ದೊಡ್ಡ ದೊಡ್ಡ ಬೋರ್ಡ್‌ಗಳನ್ನೇ ಹಾಕಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುವ ಗ್ಯಾಂಬ್ಲರ್ಸ್ ಇದ್ದಾರೆ.ಚಿಕ್ಕಪೇಟೆ ಮತ್ತು ಸುತ್ತ ಮುತ್ತ ಪ್ರದೇಶದಲ್ಲಿ ಅನೇಕ ಕ್ಲಬ್‌ಗಳು ಇವೆ. ಇವರುಗಳನ್ನು ನಿಮ್ಮ ಪೋಲೀಸಿನವರು ಹಿಡಿಯುವುದೇ ಇಲ್ಲ. ಯಾರೋ ಒಬ್ಬ ಬೀದಿಯಲ್ಲಿ ಸ್ವಲ್ಪ ತಮಾಷೆಗಾಗಿ ಕಾಲು ಕಳೆಯುವುದಕ್ಕೆ ಇಷ್ಟೆಲ್ಲಾ ತೆಗೆದಾ ಅಂದರೆ ಅವರನ್ನು ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ ೨ ದಿನ ಅಲ್ಲೇ ಇಟ್ಟುಕೊಂಡು ಚೆನ್ನಾಗಿ ಹೊಡೆದು ಕಳುಹಿಸುತ್ತಾರೆ. ನಿಮ್ಮ ಅಧಿಕಾರದಲ್ಲಿ ಬೂಟ್-ಲೆಗ್ಗಿಂಗ್ ನಿಂತುಹೋಗಿದೆಯೇ? ಬೂಟ್-ಲೆಗ್ಗಿಂಗ್‌ನ್ನು ಮಾಡುತ್ತಲೇ ಇದ್ದಾರೆ ಮೊನ್ನೆ ಇಲೆಕ್ಷನ್ ಟೈಮ್‌ನಲ್ಲಿ ನಾವಿರಾರು ಲೀಟರ್‌ನಷ್ಟು ಸಪ್ಲೈ ಮಾಡಿದ್ದಾರೆಂಥಟ್ಟಿ ಸಾರಾಯಿ ಕುಡಿದು ನಮ್ಮ ಮುಳಬಾಗಿಲು ತಾಲ್ಲೂಕಿನಲ್ಲಿ ಒಬ್ಬ ಸತ್ತೇ ಹೋಗಿ ಬಿಟ್ಟ. ಈ ಅಕ್ರಮಗಳನ್ನೆಲ್ಲಾ ಈಗಿರುವ

ಕಾನೂನಿಂದಲೇ ತಡೆಯಬಹುದು. ಇದಕ್ಕಾಗಿ ಈ ಅಮೆಂಡ್‌ಮೆಂಟ್‌ನ್ನು ತರುವ ಅವಶ್ಯಕತೆ ಇರಲಿಲ್ಲ. ನಾನು ಸ್ವಷ್ಟವಾಗಿ ಹೇಳುತ್ತೇನೆ ಈ ಅಮೆಂಡ್‌ಮೆಂಟಿನಿಂದ ಹೈಕೋರ್ಟಿಗೆ ಅವಮಾನ ಮಾಡಿದ ಹಾಗೆ ಆಗುತ್ತದೆ. ಇಂಥ ಕಾನೂನು ಬೇಕು ಎನ್ನುವುದು ನಿಜವಾಗಿಯೂ ನ್ಯಾಯಬದ್ಧವಲ್ಲವಾದ್ದರಿಂದ ಇದನ್ನು ವಾಪಸ್ ತೆಗೆದುಕೊಳ್ಳಬೇಕು. ಈಗಿರುವ ಗೂಂಡಾ ಆಕ್ಟ್‌ನಲ್ಲೇ ಅನುಕೂಲ ಇದೆ. ಈ ರೀತಿ ಎಲ್ಲಾ ಕಾನೂನುಗಳನ್ನು ಮಾಡಿ ನೀವು ಯಾರ ಕೈಗೆ ಕೊಡುತ್ತೀರೆಂದರೆ, ಯಾರ ಹತ್ತಿರ ವಾಸ್ಟ್ ಪವರ್ ಇರುತ್ತದೋ ಅವರಿಗೇ ಕೊಡುತ್ತಿದ್ದೀರಿ. ಅಧಿಕಾರದಲ್ಲಿ ಇರುವ ಅಧಿಕಾರಿಗಳಿಗೆ ಈ ಕಾನೂನನ್ನು ಕೊಡುತ್ತಿದ್ದೀರಿ. ಯಾರೋ ಒಬ್ಬ ಜಾಸ್ತಿ ಲಂಚ ಕೊಡಲಿಲ್ಲ ಎನ್ನುವ ಕಾರಣಕ್ಕೋಸ್ಕರ ಅವನನ್ನು ಒಳಗೆ ಹಾಕುವುದಕ್ಕೆ ಇದರಲ್ಲಿ ವ್ಯವಸ್ಥೆ ಮಾಡಿಕೊಟ್ಟಿದ್ದೀರಿ. ಇನ್ನು ಡ್ರಗ್ ಆಫೆಂಡರ್ಸ್‌ಗಳನ್ನು ಹಿಡಿಯುವುದಕ್ಕೆ ಅನುಕೂಲ ವಾಗುತ್ತದೆಂದು ಹೇಳುತ್ತೀರಿ. ಡ್ರಗ್ ಆಫೆಂಡರ್ಸ್‌ಗಳನ್ನು ಹಿಡಿಯುವುದಕ್ಕೆ ನಿಮ್ಮಿಂದಆಗುವುದಿಲ್ಲ. ಅವರುಗಳೆಲ್ಲಾ ಲಕ್ಷಧೀಶ್ವರರು ಅವರು ನಿಮ್ಮ ಇನ್ಸ್‌ಪೆಕ್ಟರುಗಳಿಗೆ ಲಂಚ ಕೊಟ್ಟು ಎಲ್ಲಾ ಸರಿಮಾಡಿಕೊಂಡುಬಿಟ್ಟಿರುತ್ತಾರೆ, ಬೂಟ್-ಲೆಗ್‌ರ್ಸ್‌ಗಳನ್ನು ನೀವು ಕಂಟ್ರೋಲ್ ಮಾಡಿಲ್ಲ. ಇನ್ನು ಟ್ರಾಫಿಕ್ ಆಫೆಂಡರ್ಸ್ ಬಗ್ಗೆ ಅದು ತಮಗೇ ಗೊತ್ತಿದೆ ಸಾಧ್ಯವಿಲ್ಲವೆಂದು. ಸ್ಲಮ್-ಗ್ರಾಬರ್ಸ್ ಬಗ್ಗೆ ಸಹ ಹೊಸದಾಗಿ ಆಕ್ಟ್ ಮಾಡಿದ್ದೀರಿ. ಯಾರು ಬಡವರು ಳಿ ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೋ ಅಂಥವುಗಳನ್ನು ಮಾತ್ರ ತಕ್ಷಣ ಕಿತ್ತುಹಾಕುತ್ತೀರಿ. ನಿಜವಾಗಿ ಇದು ಬಹಳ ಅನ್ಯಾಯ. ಅದರಿಂದ ಈ ಕಾನೂನನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗಿರುವ ಆಕ್ಟ್‌ನಲ್ಲೇ ಅನುಕೂಲತೆ ಇರುವಾಗ ಹೊಸದೇ ಆಕ್ಟ್ ಮತ್ತೆ ಏಕೆ ಬೇಕು? ಆದರಿಂದ ಮಾನ್ಯ ರಾಜಯ್ಯನವರಲ್ಲಿ ಪ್ರಾರ್ಥಿಸಿ ಈ ಆಕ್ಟನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.(ಗದಗ್).—ಮಾನ್ಯ ಸಭಾಧ್ಯಕ್ಷರೇ, ಶ್ರೀ ಮಾನ್ ರಾಜಯ್ಯನವರು ಗೃಹ ಸಚಿವರಾಗಿ ೧೯೮೭ನೇ ಇಸವಿಯ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳ ಪುಂಠಾದವರ ಹಾವಳಿಯನ್ನು ತಡೆಗಟ್ಟಲು ಒಂದು ಅಮೆಂಡಮೆಂಟ್ ಬಿಲ್‌ನ್ನು ತಂದಿದ್ದಾರೆ. ಮಾನ್ಯ ಮಂತ್ರಿಯವರಿಗೆ ಖಾತ್ರಿಯಾಗಿದೆ, ಈಗಿರುವ ಕಾನೂನಿನಿಂದಲೇ ಅನೇಕ ಜನ ನಿರಪರಾಧಿಗಳನ್ನು ಹಾಗು ಚುನಾಯಿತ ಪ್ರತಿನಿಧಿಗಳನ್ನು ತೊಂದರೆಗೆ ಈಡು ಮಾಡುತ್ತಿದ್ದಾರೆ. ಈಗಿರುವಕ್ಷಿಕಾನೂನನ್ನು ಅಮೆಂಡ್ ಮಾಡಿದರೆ ನಮ್ಮ ಸಮಸ್ಯೆಗಳು ಪರಿಹಾರವಾಗುತ್ತವೆಂದು ಕಂಡು ಬಂದರೆ ಆವರು ಬೇಕಾದ ಕಾನೂನ್ನು ಮಾಡಲಿ. ಆದರೆ ಅದು ಆಗುವುದಿಲ್ಲ. ಮಹಾತ್ಮ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದರು The best governed Government is the best Government ಮಾನ್ಯ ರಾಜಯ್ಯನವರು ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು. ನಾವೇನು ಬಹಳ ದಿವಸ ಮಂತ್ರಿಗಳಾಗಿ ಅಧಿಕಾರದಲ್ಲಿರುವುದಿಲ್ಲ. ಆದರೆ ನಾವು ಮಾಡಿದ ಕಾನೂನು ಮಾತ್ರ ಬಹಳ ದಿನ ಇರುತ್ತದೆ ಆ. ಕಾನೂನು ಚಲಾಯಿಸುವ ಅಧಿಕಾರಿಗಳು. ಜನರ ಹಿತಕ್ಕೆ ಕಾನೂನನ್ನು ಉಪಯೋಗಿಸಿದರೆ ಒಳ್ಳೆಯದು. ಅಧಿಕಾರಿ ಹಿತಕ್ಕಿಂತಲೂ ಜನರ ಸೇವೆ ಅವಶ್ಯವೆಂದು ತಿಳಿಯಬೇಕು.

೨-೦೦ ಪಿ.ಎಂ.

†ಶ್ರೀ ಕೆ.ಹೆಚ್. ಪಾಟೀಲ್.—ನಮ್ಮ ಅಧಿಕಾರದ ಹಿತಕ್ಕಿಂತಲೂ ಹೆಚ್ಚು ಜನತೆಯ ಸೇವೆ ಅವಶ್ಯವಾದುದು ಎಂದು ನಾವು ಮನಗಾಣಬೇಕು ಮತ್ತು ಆ ಕಡೆಗೆ ಹೆಚ್ಚು ಗಮನ ಕೊಡಬೇಕು. ಇವೊತ್ತು ಮಾನ್ಯ ರಾಜಯ್ಯನವರು ಈ ಅಧಿಕಾರವನ್ನು ಯಾರಿಗೆ ಕೊಡಬೇಕೋ, ಅವರಿಗೆ ಕೊಡುವುದನ್ನು ಬಿಟ್ಟು ಯಾರಾದರೂ ಕೈಯಲ್ಲಿ ಕೊಟ್ಟರೆ, ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟ ಹಾಗೆ ಆಗುತ್ತದೆ. ಹಾಗೆ ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟರೆ ಆದರ ಗತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಯಾರು ಈ ಕಾನೂನು ಮಾಡುತ್ತಾರೋ ಅವರೇ ಇದಕ್ಕೆ ಬಲಿ ಆದರೆ ಆಶ್ಚರ್ಯ ಪಡಬೇಕಾಗುತ್ತದೆ. ಇವೊತ್ತು ಗೂಂಡಾಗಿರಿ ಯಾರು ಮಾಡುತ್ತಿದ್ದಾರೆ ? ಯಾರ ಕೈಯಲ್ಲಿ ಇದೆ ? ಗೂಂಡಾಗಳು ಯಾರು ಅಂದರೆ, ಅವರು ಪೋಲೀಸರೇ. ಪೋಲೀಸರು ಮಾಡ ತಕ್ಕಂಥ ಗೂಂಡಾಗಿರಿಯನ್ನು ಬೇರೆ ಯಾರೂ ಮಾಡುವುದಿಲ್ಲ ಎಂದು ಹೇಳಬೇಕಾಗುತ್ತದೆ. ನಿಜವಾದ ಗೂಂಡಾಗಳು ಇವರೇ. ಇವೊತ್ತು ನಿರಪರಾಧಿಗಳನ್ನು ಎಳೆದುಕೊಂಡು ಬಂದು ರಸ್ತೆಯಲ್ಲಿ ಬೇಕಾದಂತೆ ಹೊಡೆಯುತ್ತಾರೆ, ಇವರನ್ನು ಕೇಳುವವರು ಇಲ್ಲ. ಹೆಣ್ಣುಮಕ್ಕಳನ್ನು ಬೆತ್ತಲೆ ಮಾಡಿ ಅತ್ಯಾಚಾರ ಮಾಡುತ್ತಾರೆ, ಹೊಡೆಯುತ್ತಾರೆ, ಬಡಿಯುತ್ತಾರೆ, ಇವರನ್ನು ಕೇಳುವವರು ಇಲ್ಲ. ಹಳ್ಳಿಯ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮುಗ್ಧ ಜನರ ಮೇಲೆ, ಬಡವರ ಮೇಲೆ ದುರ್ಬಲರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹಾಕಿ, ೧೦೭, ೧೫೫ನೇ ಕಲಮ್‌ಗಳನ್ನು ಹಾಕಿ ತೊಂದರೆ ಕೊಡುತ್ತಿದ್ದಾರೆ, ಅನೇಕ ರೀತಿಯಲ್ಲಿ ಸಂಕಷ್ಟಗಳಿಗೆ ಈಡು ಮಾಡಿದ್ದಾರೆ, ಸಂಕಟ ಪಡುವಂತೆ ಮಾಡುತ್ತಿದ್ದಾರೆ, ಇವರನ್ನು ಕೇಳುವವರು ಇಲ್ಲ. ಒಂದು ವೇಳೆ ಇವರನ್ನು ವಿಚಾರ ಮಾಡಲಿಕ್ಕೆ ಹೈಕೋರ್ಟ್ ಎಂಬುದು ಇಲ್ಲದಿದ್ದರೆ ಜನರು ಬಾಳುವೆ ಮಾಡುವುದೇ ಕಷ್ಟವಾಗುತ್ತಿತ್ತು. ಇಂತಹ ಒಂದು ದುಸ್ಥಿತಿ ನಮ್ಮಲ್ಲಿ ತಂದಿದ್ದಾರೆ. ಇತ್ತೀಚೆಗೆ ಹೈಕೋರ್ಟಿನಲ್ಲಿ ಪರ್ಷಾನಗಟ್ಟಲೆ ಈ ಕೇಸ್‌ಗಳು ಇರುವುದರಿಂದ ಜನರು ತೊಂದರೆಗೀಡಾಗಿದ್ದಾರೆ. ಅದನ್ನು ನಾನು ಇಲ್ಲಿ ಹೇಳಲಿಚ್ಛಿಸುವುದಿಲ್ಲ. ಮೊನ್ನೆ ಮೊನ್ನೆ ತಾನೇ ಗುಲ್ಬರ್ಗದಲ್ಲಿ ನಡೆದಂತಹ ಘಟನೆಯ ಬಗ್ಗೆ ವಿಚಾರ ಮಾಡಿ. ಅಲ್ಲಿನ ಚುನಾಯಿತ ಸದಸ್ಯರನ್ನು, ನಗರಸಭೆಯ ಅಧ್ಯಕ್ಷರನ್ನು ಯಾವುದೇ ಕಾರಣ ಹೊರಿಸಿ, ಅವರನ್ನು ಹೊಡೆದು, ಬಡಿದು, ಅಪಮಾನುಷವಾದ ರೀತಿಯಲ್ಲಿ, ಬೆತ್ತಲೆ ಮಾಡಿ ಮೆರವಣಿಗೆ ಮಾಡಿಸಿ, ಅಪಮಾನ ಮಾಡಿದವರು ಯಾರು ? ಅದರ ಕೀರ್ತಿ ಯಾರಿಗೆ ಸಲ್ಲುತ್ತದೆ, ಇವರಿಗೇ ಅಲ್ಲವೆ ? ಇವರು ಗೂಂಡಾಗಿರಿ ಮಾಡುವವರು ಅಲ್ಲವೇ ? ಗೂಂಡಾಗಳು ಅಲ್ಲವೇ ಈ ಕಾರ್ಯವನ್ನು ಜಾರಿಗೊಳಿಸುವಲ್ಲಿ ಆ ಸಮಿತಿಯಲ್ಲಿ ಎಸ್.ಪಿ.ಯವರಾಗಿರಲಿ, ಐ.ಜಿ.ಪಿ.ಯವರಾಗಿರಲಿ, ಅಥವಾ ಇತರ ಅಧಿಕಾರಿಗಳೇ ಆಗಿರಲಿ, ಅವರು ಅಧಿಕಾರದಲ್ಲಿರುವವರನ್ನು ನೋಡುತ್ತಾರೆ. ರಾಜಯ್ಯನವರು ಅಧಿಕಾರದಲ್ಲಿರುವುದರಿಂದ ಅವರಿಗೆ ಅನುಕೂಲವಾಗುವಂತೆ ಮಾಡುವುದು, ಅವರ ಜನರನ್ನು ಬಿಡೋಣ ಎಂಬ ಭಾವನೆ ತಾಳುವುದು, ಅವರವರು ಅಲ್ಲವರನ್ನು ಹಿಡಿದುಹಾಕುವುದು. ಇತ್ಯಾದಿಯಾಗಿ ಮಾಡಲು ಪ್ರಾರಂಭವಾಗುತ್ತದೆ. ಮಾನ್ಯ ರಾಜಯ್ಯನವರಿಗೆ ಜಾತ್ಯಾತೀತ ಭಾವನೆ ಇರಬಹುದು, ಇದೆ. ಆದರೆ ಜಾತೀಯತೆಯ ಭಾವನೆಯುಳ್ಳ ಜನ ರಾಜಯ್ಯನವರನ್ನು ಕೂಡ ಅವರ ಹಾಗೆ ಮಾಡುತ್ತಾರೆ. ಹಾಗೆ ಆಗಬಾರದು ಎಂದು ನಮ್ಮ ಆಶಯ. ಮಹಾತ್ಮಾಗಾಂಧೀಜಿಯವರ ಮಾತನ್ನು ತಾವುಗಳು ಇಮ್ಪ್ಲೊತ್ತಾದರೂ ನೆನಸಿಕೊಳ್ಳಬೇಕು. ಈ ಆಕ್ಟನ್ನು ಮಾಡುವಾಗ ತಾವುಗಳು ಹೇಳಿದ್ದೀರಿ. ಇದನ್ನು ಸೂಕ್ತ ಮಾರ್ಗದಲ್ಲಿ ಬಳಸುತ್ತೇವೆ. ಇದರಿಂದ ನಮಗೆ ಗೂಂಡಾಗಳನ್ನು ಹಿಡಿಯಲಿಕ್ಕೆ ಆಗುತ್ತದೆ ಎಂದು ಆಗ ಕೇಳಿಕೊಂಡಿದ್ದೀರಿ. ಒಪ್ಪಿಗೆಯೂ ದೊರಕಿದ್ದಾಯಿತು. ಇಮ್ಪ್ಲೊತ್ತಿನ ತನಕ ಎಷ್ಟು ಜನ ಗೂಂಡಾಗಳನ್ನು ಹಿಡಿದಿದ್ದಾರೆ ? ಯಾರೂ ಸಿಕ್ಕಿಲ್ಲ. ಲಂಚ ಕೋರರನ್ನು ಹಿಡಿಯುತ್ತೇವೆ ಎಂದು ಹೇಳುತ್ತೀರಿ. ಅವರು ನಿಮ್ಮ ಕೈಯಲ್ಲಿ ಸಿಗುತ್ತಾರೆಯೇ ? ಯಾರಾದರೂ ಒಬ್ಬ ಬಡಪಾಯಿ ತನ್ನ ಬಳಿಗೆ ಬಂದವರ ಹತ್ತಿರ ಎರಡು ಆಣೆಗಳನ್ನು ಚಹಾಕ್ಕೋಸ್ಕರ ತೆಗೆದುಕೊಂಡಲ್ಲಿ ಅಂತಹವನನ್ನು ಹಿಡಿಯುತ್ತೀರಿ ಅವನು ಬಲಿ ಬೀಳುತ್ತಾನೆ. ಲಕ್ಷಗಟ್ಟಲೆ ತಿಂದು ತೇಗುವವರು ಮಾತ್ರ ಇವರ ಬಲೆಗೆ ಬೀಳುವುದಿಲ್ಲ. ಇದು ಪರಿಸ್ಥಿತಿ. ಇನ್ನು ಗ್ಯಾಂಬ್ಲಿಂಗ್‌ಗೆ ಸರಕಾರ ಪ್ರೋತ್ಸಾಹ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಯಾವುದಕ್ಕೆ ಗ್ಯಾಂಬ್ಲಿಂಗ್ ಅನ್ನುತ್ತಿದ್ದಾರೋ ? ಹಾರ್ಸ್ ರೇಸ್ ಗ್ಯಾಂಬ್ಲಿಂಗ್ ಅಲ್ಲವೇ ? ಅಲ್ಲಿ ಜೀಪ್ ಸೆಕ್ರೆಟರಿಯವರಿಂದ ಹಿಡಿದುಕೊಂಡು ಐ.ಜಿ.ಪಿ. ಯವರ ವರೆಗೆ ದಿನವೂ ಅಲ್ಲಿಗೆ ಹೋಗುವುದಿಲ್ಲವೇ ? ಅಲ್ಲಿ ಇವರಿಗೆಲ್ಲಾ ಕುಡಿಯುವುದಕ್ಕೆ ಸರಬರಾಜು ಇಲ್ಲವೇ ? ಯಾರ ಕೈಯಲ್ಲಿ ನೀವು ಅಧಿಕಾರವನ್ನು ಕೊಡುತ್ತೀರೋ ಅದು ಅವರ ಹಿಡಿತದಲ್ಲಿಯೇ ಇರುತ್ತದೆ. ನಿಮ್ಮ ಅಧಿಕಾರಿಗಳು ಮದೋನ್ಮತ್ತರಾಗಿದ್ದಾರೆ. ಈ ವಿಚಾರವನ್ನು ತಾವುಗಳು ವಿಚಾರ ಮಾಡಿ ನೋಡಬೇಕು. ಎಷ್ಟೋ ಜನ ಕುಡಿಯುವ ಅಧಿಕಾರಿಗಳು ಇದ್ದಾರೆ. ಅವರ ವರ್ತನೆ ಹೇಗಿರಬಹುದು ಎಂಬುದನ್ನು ಆಲೋಚನೆ ಮಾಡಿ. ದೈವೀ ವರ್ತನೆ ಇರುವವರಲ್ಲಿ ಕೂಡ ಸಜ್ಜನಿಕೆ ಮೀರಿ ಹೋದರೆ ದಾನವೀಯತೆ ಬರುತ್ತದೆ. ಕುಡಿದ ಮೇಲೆ ಯಾರೂ ಮನುಷ್ಯನಾಗಿ ಉಳಿಯುವುದಿಲ್ಲ. ಇಂತಹವರಲ್ಲಿಯೂ ಒಳ್ಳೆಯವರು ಇದ್ದರೆ, ಅಂತಹವರೇ ಸಿಕ್ಕಿಬೀಳುತ್ತಾರೆ. ಯಾರು ಕುಡಿದು ದುರ್ವರ್ತನೆ ಮಾಡುತ್ತಾರೆ ಅಂತಹ ಅಧಿಕಾರಿಗಳು ಸಿಗುವುದಿಲ್ಲ. ಇಂತಹವರ ಬಗ್ಗೆ ಕಾನೂನು ಮಾಡಬೇನೇ, ಅವರ ಕೈಯಲ್ಲಿಯೇ ಗೂಂಡಾ ಆಕ್ಟ್ ಕೊಟ್ಟರೆ ಅವರ ದರ್ಜೆಗೆ ಬಾರದವರನ್ನು ಹಿಡಿಯುತ್ತಾರೆ, ಬರುವವರನ್ನು ಬಿಡುತ್ತಾರೆ. ನಿಮ್ಮ ಸಾರಾಯಿಯನ್ನೇ ತೆಗೆದುಕೊಳ್ಳಿ. ಈ ಕರ್ನಾಟಕ ರಾಜ್ಯದೊಳಗೆ ಸರಿಯಾದ ಕೆಲಸ ಮಾಡದವರು ಎಷ್ಟು ಜನ ಅನಧಿಕೃತವಾಗಿ ಮೇಲೆ ಹತ್ತಿಲ್ಲ ? ಎಷ್ಟು ಕೋಟಿ ತಿಂದುಹಾಕಿಲ್ಲ ಹೇಳಿ ? ಕೆಟ್ಟ ಜನ ನಿಮ್ಮ ಕಡೆಯೂ ಇರ್ತಾರೆ, ನಮ್ಮ ಕಡೆಯೂ ಇರ್ತಾರೆ. ಆದರೆ ನಿಜವಾದ ಕೆಟ್ಟವನನ್ನು ಪತ್ತೆಹಚ್ಚಿ ಶಿಕ್ಷಿಸುವವರು ಯಾರು ? ಒಳ್ಳೆಯವರನ್ನು ಪ್ರೋತ್ಸಾಹಿಸುವವರು ಯಾರಿದ್ದಾರೆ ? ಹೇಳಿ. ನೀವಂತೂ ಸಜ್ಜನರು. ಸಜ್ಜನಿಕೆಯನ್ನು ನೀವು ಉಳಿಸಿಕೊಳ್ಳಬೇಕಾದರೆ ದುಷ್ಟರಿಗೆ ಶಿಕ್ಷೆ ಆಗಬೇಕು., ಸಜ್ಜನರ ರಕ್ಷಣೆಯಾಗಬೇಕು. ಈ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿದ್ದೀರಿ. ಆಗಲೇ ವೆಂಕಟರಾಮಯ್ಯನವರು ಹೇಳಿದ ಹಾಗೆ ಹತ್ತು ಜನ ಅಪರಾಧಿಗಳಿಗೆ ಶಿಕ್ಷೆ ತಪ್ಪಿದರೂ ಸರಿ, ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು ಎಂಬುದು ಕ್ರಿಮಿನಲ್ ಲಾದ ಮೂಲ ತತ್ವ. ಇದನ್ನು ಪರಕೀಯರೇ ಒಪ್ಪಿಕೊಂಡು ಮಾಡಿ ಬಿಟ್ಟು ಹೋದರು. ನಮ್ಮ ಗಾಂಧಿಮಹಾರಾಜ್ಯ ಬಂದರೂ ನೀವು

ಎಷ್ಟು ಜನ ಅಪರಾಧಿಗಳನ್ನು ಶಿಕ್ಷಿಸಿದ್ದೀರಿ ? ಎಷ್ಟು ನಿರಪರಾಧಿಗಳಿಗೆ ಶಿಕ್ಷೆಯಾಗುವುದನ್ನು ತಪ್ಪಿಸಿದ್ದೀರಿ ಹೇಳಿ ? ಇಂಥ ಸ್ಥಿತಿ ಇರುವಾಗ ಇವತ್ತಿನ ತಿದ್ದುಪಡಿಯನ್ನು ಮಾಡಿ ಅಧಿಕಾರಿಗಳ ಕೈಗೆ ನೀವು ಇನ್ನಷ್ಟು ಅಧಿಕಾರ ಕೊಟ್ಟರೆ ನಿರಪರಾಧಿಗಳಿಗೆ ಶಿಕ್ಷೆ ಆಗುವುದನ್ನು ತಪ್ಪಿಸುವುದಕ್ಕಾಗುತ್ತದೆಯೇ ?

ಕೋಟಿಗಟ್ಟಲೆ ಹೊಡೆದವರು ಕಾನೂನಿನ ಕೈಗೆ ಉಪಾಯವಾಗಿ ಸಿಕ್ಕಿಕೊಳ್ಳದೆ ಸುಮ್ಮನೆ ಕುಳಿತಿರುವಾಗ ಕಸಬು ಗೊತ್ತಿರದ ಜನ ಜೈಲಿಗೆ ಹೋಗುತ್ತಿದ್ದಾರೆ.

ಶ್ರೀ ವೇದಾಂತ ಹೆಬ್ಬಿಗೆ.—ಕುಡಿಯದವನು ಮಾತ್ರ ಕುಡಿದವನನ್ನು ಹಿಡಿಯಬೇಕು ಎಂದೇ ನೀವು ಹೇಳುತ್ತಿರುವುದು.

ಶ್ರೀ ಕೆ.ಹೆಚ್. ಪಾಟೀಲ್.—ಅದೇನೋ, ಕುಡಿತದ ಅನುಭವವಿಲ್ಲದ ನಾನು ಹೇಳಲಾರೆ. ನೀವು ಹೇಳುತ್ತಿದ್ದೀರಿ. ನೀವು ಪ್ರಜಾಪ್ರಭುತ್ವದ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಗ್ರಾಮಾಂತರ ಪ್ರದೇಶಗಳಿಗೆ, ಜನರ ಕೈಗೇ ಹೆಚ್ಚು ಅಧಿಕಾರ ಕೊಡುತ್ತೇವೆ ಎಂದು ಸಾರಿಕೊಂಡು ಎಸ್.ಕೆ. ಡೇ ಅವರನ್ನು, ಪಿ.ವಿ. ನರಸಿಂಹರಾವ್ ಅವರನ್ನು ಕರೆಸಿ ಸಮ್ಮೇಳನ ಮಾಡಿದಿರಿ. ಜನಗಳ ಕೈಗೆ ಅಧಿಕಾರ ಕೊಡಬೇಕೆನ್ನುವ ನೀವೇ ಈಗ ಇನ್ನಷ್ಟು ಅಧಿಕಾರವನ್ನು ಅಧಿಕಾರಗಳ ಕೈಗೆ ಕೊಡುತ್ತಿದ್ದೀರಲ್ಲ ಇದು ಸರಿಯೇ ? ನೀವು ಒಪ್ಪುತ್ತೀರಾ ?

ನಮ್ಮ ಗದುಗಿನ ಉದಾಹರಣೆಯನ್ನೇ ಹೇಳುತ್ತೇನೆ. ಅಲ್ಲಿನ ಮುನಿಸಿಪಾಲಿಟಿ ಮೆಂಬರೊಬ್ಬನನ್ನು ಗೂಂಡಾ ಎಂದು ಕರೆದು ಅಲ್ಲಿನ ಎಸ್ಪಿ.ಯವರು, ಐಜಿಪಿ.ಯವರು ಎಲ್ಲ ರಿಪೋರ್ಟ್ ಪಾಕೆದರು. ಗೂಂಡಾ ಆಕ್ಟ್ ಅನ್ವಯಿಸಬೇಕೆಂದು ರಿಪೋರ್ಟ್ ಹಚ್ಚಿದರು. ಆದರೆ ಆ ಮೆಂಬರು ನಿಜವಾಗಿ ಗೂಂಡಾ ಆಗಿರಲಿಲ್ಲ. ಏನೋ ಹೊಂ ಸೆಕ್ರೆಟರಿಯಾಗಿದ್ದ ಶ್ರೀ ಮುದ್ದಪ್ಪನವರು ಒಳ್ಳೆಯವರಾಗಿದ್ದರಿಂದ ವಿಷಯ ತಿಳಿದು ಅವರನ್ನು ಬಿಡುಗಡೆ ಮಾಡಿ ಕಳಿಸಿದರು. ಆತ ಬಂದು ನನ್ನನ್ನು ಕೇಳಿದ್ದಕ್ಕೆ ಕೋರ್ಟಿಗೆ ಹೋಗಿ ಎಂದೇ ಹೇಳಿದ್ದೆ. ಇಂಥದು ಎಷ್ಟು ಇವೆ, ಒಂದೆರಡಲ್ಲ. ಒಬ್ಬ ಮಾನವೀಯ ವ್ಯಕ್ತಿಯನ್ನು ಗೂಂಡಾ ಎಂದು ಲೇಬಲ್ ಹಚ್ಚಿದ ನಿಮ್ಮ ಅಧಿಕಾರಿಗಳು ಎಷ್ಟು ಜನ ನಿಜವಾದ ಗೂಂಡಾಗಳನ್ನು ಶಿಕ್ಷಿಸಿದ್ದಾರೆ ಹೇಳಿ ? ಒಬ್ಬ ಗೂಂಡಾ ಎರಡು ಮೂರು ಸಂಘ ಸಂಸ್ಥೆಗಳಲ್ಲಿ ದುಡ್ಡು ತಿಂದುಹಾಕಿ ಕೊನೆಗೆ ಸಿಕ್ಕಿಹಾಕಿಕೊಂಡಾಗ ನಿಮ್ಮ ಪಕ್ಷದಿಂದ ಗುಂಡೂರಾಯರ ಪಕ್ಷಕ್ಕೆ ಹಾರಿ ಅಲ್ಲಿ ಪ್ರಭಾವ ಬೀರಿಸಿ ನಿಮ್ಮ ಕಡೆಯಿಂದ ಕೇಸನ್ನು ವಿಥ್‌ಡ್ರಾ ಮಾಡಿಸಿಕೊಂಡ. ಇವನೇನೋ ನಿಜವಾದ ಗೂಂಡಾ, ಆದರೆ ತಪ್ಪಿಸಿಕೊಂಡ. ಆದರೆ ಯಾವನು ಗೂಂಡಾ ಅಲ್ಲವೋ ಅವನನ್ನು ನೀವು ಹೆರಾಸ್ ಮಾಡಿಸಿದಿರಿ.

ಇನ್ನು ಕೆಲವು ದೃಷ್ಟಿಯಿಂದ ವಿಚಾರ ಮಾಡುವಾಗ, ಗ್ಯಾಂಬ್ಲಿಂಗ್, ಹೋಟೆಲಿನಲ್ಲಿ ಗ್ಯಾಂಬ್ಲಿಂಗ್ ಹೌಸ್‌ಗಳಲ್ಲಿ ಹೀಗೆ ಎಲ್ಲಾ ಕಡೆ ನಡೆಯುತ್ತದೆ. ಭಟ್ಟಿಸಾರಾಯಿಯಂತೂ ರೆಗ್ಯುಲರ್ ಸಾರಾಯಿಗಿಂತ ಜೋರಾಗಿ ನಡೆಯುತ್ತಿದೆ. ಇವೆಲ್ಲಕ್ಕೆ ಕಾರಣ ಯಾರು ? ಸರ್ಕಾರದ ಪ್ರೋತ್ಸಾಹ ಇಲ್ಲದಿದ್ದರೆ ಗೂಂಡಾಗಳು ಇವನ್ನೆಲ್ಲ ನಡೆಸುವುದಕ್ಕೆ ಆಗುತ್ತಿತ್ತೆ ? ನೂರಾರು ಕೋಟಿ ರೂ. ಬಾಕಿ ಉಳಿಸಿಕೊಂಡಿರುವ ಅಬ್ಕಾರಿ ಕಂಟ್ರಾಕ್ಟರ್‌ಗಳು ಗೂಂಡಾಗಳಲ್ಲವೇ ? ಈ ಎಲ್ಲ ಮಾತುಗಳನ್ನು ಆಲೋಚನೆ ಮಾಡಿ.

ಇನ್ನೊಂದು ಮಾತನ್ನು ಹೇಳಬೇಕು. ಕ್ರಿಮಿನಲ್-ಲಾದಲ್ಲಿ ಯಾವುದೇ ವಿಷಯದಲ್ಲಿ ತತ್ವನೀತಿ ಕಾರಣ ಇದ್ಯೆವುವೂ ಇರುವುದಿಲ್ಲ. ಇದರಲ್ಲಿ ಹೇಳಿದ್ದೀರಿ. ಮಾನವನೇ ನಾಶಮಾಡತಕ್ಕಂತಹ ಕಾನೂನು. ಅವರು ಗೂಂಡಾ ಇದ್ದರೂ ಸಹ ಸುಧಾರಣೆಯಾಗುವಂತಹ ಕಾಯಿದೆ ಇದ್ದರೂ ಸಹ ಸುಧಾರಣೆ ಮಾಡಲಿಕ್ಕೆ ಅವಕಾಶ ಕೊಡದಂತಹ ಕಾನೂನು. ಅವರು ಏನು ಮಾಡಿದ್ದಾರೆ ಎಂಬುದನ್ನು ಕೇಳುವುದು ಬೇಡ ಯಾವ ತಾರೀಖು ಏನಾಗಿದೆ ಎಂದು ಹೇಳುವುದು ಬೇಡ, ಅವರು ಏನೂ ಮಾಡದಿದ್ದರೂ ಸಹ ಶಿಕ್ಷೆ ಅನುಭವಿಸಬೇಕಾಗುತ್ತದೆ. ಅವರು ಕೋರ್ಟಿಗೆ ಹೋಗಬಾರದೆಂದು ತಮ್ಮ ಉದ್ದೇಶವೇ ? ಇದು ಸದುದ್ದೇಶವೆಂದು ತಮಗೆ ಅನಿಸುತ್ತದೆಯೇ ? ತಾವು ದಯವಿಟ್ಟು ಆಲೋಚನೆ ಮಾಡಬೇಕು. ನೀವು ಹೇಳುತ್ತೀರಿ ಒಬ್ಬ ಸರಕಾರೀ ನೌಕರ ಅಧಿಕಾರಿಯು ಬದ್ಮಾಶ್ ಇದ್ದರೆ ಅವನನ್ನು ತೆಗೆಯಬೇಕಾದರೆ ಕಾನೂನು ಇಲ್ಲ. ಅವನಿಗೆ ನೋಟೀಸ್ ಕೊಡಬೇಕೆಂದು ಹೇಳುತ್ತೀರಿ. ಅನೇಕ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳು ಪ್ರೆಸ್ ಎಡಿಟರ್‌ಗೆ ಹೊಡೆದಿದ್ದಾರೆ. ಶಾಸಕರಿಗೆ ಹೊಡೆದಿದ್ದಾರೆ, ಶಾಸಕರನ್ನು ಅಮಾನುಷ ಕೃತ್ಯಕ್ಕೆ ಈಡು ಮಾಡಿದ್ದಾರೆ. ಮಾನ್ಯ

ಬೀಳಗಿಯವರು ಇಲ್ಲಿ ಇಲ್ಲ. ಅವರ ಹೆಣ್ಣು ಮಕ್ಕಳನ್ನು ಸಹ ಅವಮಾನ ಮಾಡಿದುದು ತಮ್ಮ ಜನರಿಗೆ ಬಂದಿಲ್ಲವೇ ? ಅಂತಹವರು ಗೂಂಡಾಗಳಲ್ಲವೇ ? ಯಾವ ತಾರೀಖು ಏನು ನಡೆಯಿತು ಎಂದು ಹೇಳಲೂ ಆಗುವುದಿಲ್ಲ. ಎಲ್ಲರೂ ನಿಮ್ಮ ಹತ್ತಿರಕ್ಕೆ ಬರಲು ಸಾಧ್ಯವಾಗುವುದಿಲ್ಲ, ನಿಮ್ಮ ಹತ್ತಿರಕ್ಕೆ ಎಲ್ಲರೂ ಬರುವುದು ಅನಾವಶ್ಯಕ. ಅಧಿಕಾರಿಗಳು ದುರುಪಯೋಗ ಮಾಡಿ, ದುರ್ವರ್ತನೆಗೆ ತೊಡಗಿದರೆ ಮಾನಹಂತರ ಸುಧಾರಣೆ ಹೇಗಾಗುತ್ತದೆ ? ಈ ಬಗ್ಗೆ ತಾವು ವಿಶೇಷವಾದ ಗಮನವನ್ನು ಕೊಡಬೇಕು. ಹೈಕೋರ್ಟಿನವರು ಬಂದು ವೇಳೆ ನೀವು ಹಿಡಿದಿರುವ ಮನುಷ್ಯನನ್ನು ಅಪರಾಧಿ ಅಲ್ಲವೆಂದು ಬಿಟ್ಟರೆ ನಾವು ಹಿಡಿದಿದ್ದೆವು ಅವರು ಬಿಟ್ಟಿದ್ದಾರೆ ಎಂದು ಹೇಳುತ್ತೀರಿ. ಹೈಕೋರ್ಟನ್ನು ಬಂದ್ ಮಾಡುತ್ತೀರಾ ? ಹೈಕೋರ್ಟನ್ನು ಬಂದ್ ಮಾಡಿ ನಾವು ಮಾಡಿದ್ದೇ ಆಗಬೇಕೆಂದರೆ ಹೇಗೆ ? ನೀವು ಎಷ್ಟು ದಿವಸ ಪಾಯಂ ಆಗಿ ಅಧಿಕಾರದಲ್ಲಿ ಇರುತ್ತೀರಿ ಎಂದು ತಿಳಿದುಕೊಂಡಿದ್ದೀರಿ. ಎಂತೆಂಥಹವರೋ ನಿಮ್ಮ ಎದುರಿಗೇ ಹೋಗಿಲ್ಲ ಸೂರ್ಯ ಚಂದ್ರ ಇರುವವರೆಗೂ ನಾನೇ ಇರುವೆನು ಎಂದು ಹೇಳುತ್ತಿದ್ದಂತಹವರು ಮಣ್ಣು ಮುಕ್ಕಿ ಹೋಗಿಲ್ಲ. ನೀವು ಇರತಕ್ಕಂತಹ ಅಧಿಕಾರ ಸ್ಥಿರವಲ್ಲ. ನಿಮ್ಮನ್ನು ನಾನು ಹೋಗಿ ಎಂದು ಹೇಳುವುದಿಲ್ಲ. ನೀವು ಮಾಡತಕ್ಕಂತಹ ಕೃತ್ಯಗಳು ಮಾತ್ರ ಸ್ಥಿರವಾಗಿರುತ್ತವೆ. ಯಾವುದೇ ಕಾಲಕ್ಕೆ ಅಧಿಕಾರ ಕಳೆದುಕೊಂಡಂತಹ ಜನ ನನ್ನ ಮಗೆ ಗೂಂಡಾ ಆಕ್ಟ್‌ನಲ್ಲಿ ಸಿಕ್ಕಿದ್ದಾನೆ ಎನ್ನುವಂತಹ ದುರ್ಬಲವಾದಂತಹ ಪರಿಸ್ಥಿತಿ ಬರಬಹುದು. ಹಿಂದಿನ ಅನೇಕ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ-ಲಂಚ ತಿನ್ನುತಿದ್ದವರೆ, ಹಣವನ್ನು ಎಲೆಕ್ಷನ್‌ಗೆ ಕೊಟ್ಟವರ ಲಿಸ್ಟ್ ಇದೆ ಎಂದು ಹೇಳಿದ್ದಾರೆ. ಇದು ತಮಗೆ ಗೊತ್ತಿಲ್ಲವೇ ? ಯಾರು ಜನರ ಕಡೆಯಿಂದ ಶೋಷಣೆ ಮಾಡಿ ಹಣವನ್ನು ತೆಗೆದುಕೊಂಡು ಲೆಕ್ಕ ಕೊಡದೇ ಪಕ್ಷದ ಹೆಸರಿನಿಂದ ತಮ್ಮ ಪೊಟ್ಟಿಯನ್ನು ಮುಂದಕ್ಕೆ ಮಾಡುತ್ತಾರೆಯೋ ಅಂತಹವರು ಗೂಂಡಾಗಳಲ್ಲವೇ? ತಾವು ಹಿಂದೆ ಮಾಡಿದಂತಹ ಕೃತ್ಯಕ್ಕೆ ತಪ್ಪನ್ನು ವ್ಯಕ್ತ ಮಾಡಿದರೆ ಅಷ್ಟು ಹೊತ್ತಿಗೆ ಕೈಮೀರಿ ಹೋಗಿರುತ್ತದೆ. ಹಾಗೇ ತಾವೂ ಆಗಬಾರದು. ನೀವು ಗೂಂಡಾಗಳೆಂದು ಯಾರಿಗೆ ಹೇಳುತ್ತೀರಿ ? ಇವರು ಗೂಂಡಾಗಳಲ್ಲವೇನು ? ನಿಮ್ಮ ಆಜು ಬಾಜು ಇದ್ದವರು ನೀವು ಏನೂ ಮಾಡಲಾರದ ಹಾಗೆ ಮಾಡಿ ಇರುತ್ತಾರೆ. ಈಗ ಇದ್ದ ಕಾನೂನೇ ದೊಡ್ಡದಾಗಿದೆ. ಇದ್ದ ಕಾನೂನನ್ನು ಸರಿಯಾಗಿ ಅಂದರೆ ಅದರ ಪಾಲನೆ ಪೋಷಣೆಯನ್ನು ಮಾಡಿದರೆ ಬೇಕಾದಷ್ಟು ಗೂಂಡಾಗಳನ್ನು ನಿಯಂತ್ರಣ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅದರ ಹೊರತಾಗಿ ಮತ್ತೊಮ್ಮೆ ಕಾನೂನು ಮಾಡಿ ಕರ್ನಾಟಕದ ಜನತೆಗೆ ಇದರಿಂದ ಕೆಟ್ಟ ಹೆಸರು ತರುವುದು ಬೇಡ. ಕೆಟ್ಟ ಆಡಳಿತ ಕರ್ನಾಟಕ ರಾಜ್ಯದಲ್ಲಿ ಆಗುತ್ತಿದೆ ಎಂದು ಯಾರೋ ಒಬ್ಬರು ಮಾಡಿದ ತಪ್ಪಿಗೆ ಎಲ್ಲ ಜನರನ್ನೂ ಅಂದರೆ ಇಡೀ ಕರ್ನಾಟಕ ಜನತೆಗೇ ಕೆಟ್ಟ ಹೆಸರನ್ನು ತರತಕ್ಕಂತಹ ದುಃಖ ಬರುವಂತಹ ರೀತಿಯಲ್ಲಿ ಆಗುತ್ತದೆ. ನಾನು ಇದನ್ನು ಬಲವಾಗಿ ವಿರೋಧಿಸಿ ಈ ರೀತಿಯ ವ್ಯವಹಾರ ತಮ್ಮ ಕಡೆಯಿಂದ ಆಗಬಾರದೆಂದು ವಿನಂತಿ ಮಾಡುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಂ. ಚಿಕ್ಕಬೋರೇಗೌಡ.—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಮಾತನಾಡಿದಂಥ ಮಾನ್ಯ ಸದಸ್ಯರು ಈ ತಿದ್ದುಪಡಿ ಏನು ಇದೆ, ಇದನ್ನು ಕೂಲಂಕಷವಾಗಿ ನೋಡದೆ ಈಗಿನ ಸಮಾಜದಲ್ಲಿ ಯಾವ ಯಾವ ದುಷ್ಕರ್ಮಿಗಳು ಏನೇನು ಮಾಡುತ್ತಿದ್ದಾರೆ, ಅಧಿಕಾರಿಗಳು ಯಾವ ರೀತಿ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿ ವಿವರಣೆ ಕೊಟ್ಟರೇ ಹೊರತು ಇಲ್ಲಿ ತಿದ್ದುಪಡಿಯನ್ನು ತಂದಿರತಕ್ಕಂಥ ಉದ್ದೇಶ ಏನು ಇದೆ ಎಂದರೆ ಅದು ಈ ರೀತಿ ಇದೆ.

> "6A. Grounds of detention severable Where person has been detained in pursuance of an order of detention under sub-section (1) or sub-section (2) of section 3, which has been made on two ro more grounds, such order of detention shall be deemed to have been made separately on each of such grounds".

ಎಂದು ಇದೆ. ನಾನಾದರೂ ಅರ್ಥ ಮಾಡಿಕೊಂಡಿರುವುದು ಇಷ್ಟೆ. ಇಲ್ಲಿ ಎರಡು ಸ್ಟೇಜ್ ಇದೆ ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಒಂದನೆಯದು ಡಿಟೆನ್ಷನ್ ಆರ್ಡರ್, ಎರಡನೆಯದು ಆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಡಿಟೆನ್ಷನ್ ಆರ್ಡರ್ ತಪ್ಪಾಗಿದೆ, ಇದನ್ನು ರದ್ದು ಮಾಡಬೇಕು. ಈ ಡಿಟೆನ್ಷನ್ ಆರ್ಡರ್ ಮಾಡಿದ ನಂತರ ಆ ಆರ್ಡರ್‌ನಲ್ಲಿ ೫–೬ ತಪ್ಪುಗಳನ್ನು ಕಂಡು ಆ ಐದಾರು ತಪ್ಪುಗಳ ಮೇಲೆ ಅವರು ಡಿಟೆನ್ಷನ್ ಆರ್ಡರ್ ಮಾಡಿದ ಪಕ್ಷದಲ್ಲಿ ಒಂದು ವೇಳೆ ಅದರಲ್ಲಿ ಒಂದೋ ಎರಡೋ ಲೋಪ ಇತ್ತು ಎಂದರೆ ಅದರಲ್ಲಿ ಅದು ಅನಾಹುತವಾಗಿ ವೇಗ್ ಎಂದು ಹೇಳುತ್ತಾರೆ ಅಥವಾ ಕೆಲವು ರುಜುವಾತು ಆಗದೇ ಇದ್ದ ವಿಷಯ ಇರಬಹುದು. ಆ ರೀತಿ ಒಂದೋ ಎರಡೋ ತಪ್ಪು ಇದ್ದರೂ ಸಹಾ ಆ ಡಿಟೆನ್ಷನ್ ಆರ್ಡರ್‌ನ್ನು ರದ್ದು ಮಾಡಬಾರದು ಎನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದೆ ಎಂದು ನಾನಾದರೂ ಅರ್ಥ ಮಾಡಿಕೊಂಡಿದ್ದೇನೆ. ಇದರ ಬಗ್ಗೆ ಹೇಳುವುದಾದರೆ ನಾವು ಈಗ ಎಷ್ಟರಮಟ್ಟಿಗೆ ಪೋಲೀಸರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಅಥವಾ ಆ ದುರುಪಯೋಗ ಮಾಡಿಕೊಂಡಿದ್ದರಿಂದ ಏನು ಅನಾಹುತಗಳು ಆಗುತ್ತವೆ ಎನ್ನುವ ವಿಷಯದಲ್ಲಿ ಮುಂದೆ ಬರುವುದಿಲ್ಲ. ಏಕೆಂದರೆ, ಈ ತಿದ್ದುಪಡಿ ಒಂದು ಡಿಟೆನ್ಷನ್ ಆರ್ಡರ್ ಆದ ನಂತರ ಏನಾಗಬಹುದು, ಆ ಆರ್ಡರ್‌ನಲ್ಲಿ ಸಣ್ಣ ಪುಟ್ಟ ದೋಷಗಳು ಇದ್ದ ಪಕ್ಷದಲ್ಲಿ ಆ ಸಣ್ಣಪುಟ್ಟ ದೋಷಗಳಿಂದ ಮಾತ್ರ ಆ ಡಿಟೆನ್ಷನ್ ಆರ್ಡರ್ ರದ್ದಾಗಿ ಕೂಡದು ಎನ್ನುವ ವಿಷಯವಾಗಿ ಈ ತಿದ್ದುಪಡಿಯನ್ನು ತಂದಿದೆ. ಆದ್ದರಿಂದ ಮಾನ್ಯ ಸದಸ್ಯರು ಮಾತನಾಡಿದ ಹಾಗೆ ಯಾವ ಒಂದು ನಿದರ್ಶನವಾಗಲಿ, ಅಥವಾ ಲೋಪದೋಷಗಳಾಗಲಿ ಹೆಂಡ ಕುಡಿಯುವವರು ಜಾಸ್ತಿಯಾಗುತ್ತಿದ್ದಾರೆ, ಕಳ್ಳಭಟ್ಟಿ ಕುಡಿಯುವವರು ಜಾಸ್ತಿಯಾಗುತ್ತಿದ್ದಾರೆ, ಜೂಜು ಆಡುವವರು ಜಾಸ್ತಿಯಾಗುತ್ತಿದ್ದಾರೆ, ಜೂಜು ಆಡುವ ಮನೆಗಳು ಜಾಸ್ತಿಯಾಗುತ್ತಿವೆ ಎನ್ನುವ ಸಮಾವೇಶದಲ್ಲಿ ಬರುವುದಿಲ್ಲ. ನಾವು ಇದರ ಬಗ್ಗೆ ನಮ್ಮಂದಿಸಿರುವುದು ಡಿಟೆನ್ಷನ್ ಆರ್ಡರ್ ಆದ ನಂತರ ಏನಾದರೂ ಒಂದು ಸಣ್ಣ ದೋಷ ಇದ್ದು, ಆ ಸಣ್ಣ ದೋಷದ ಪ್ರಯುಕ್ತ ಇದನ್ನು ಕ್ಯಾನ್ಸಲ್ ಮಾಡಕೂಡದು ಅಥವಾ ಈ ಗೂಂಡಾಯಿಸಂ ಮಾಡಿದ ವ್ಯಕ್ತಿ ಕೈತಪ್ಪಿಸಿಕೊಂಡು, ಕಾನೂನಿಂದ ತಪ್ಪಿಸಿಕೊಂಡು, ಹೋಗದೇ ಇರಲಿ ಎನ್ನುವ ದೃಷ್ಟಿಯಿಂದ ತಿದ್ದುಪಡಿಯನ್ನು ತಂದಿದ್ದೇವೆಯೇ ಹೊರತು ಇನ್ನು ಯಾವ ದೃಷ್ಟಿಯಿಂದಲೂ ಈ ತಿದ್ದುಪಡಿಯನ್ನು ತಂದಿಲ್ಲ. ಆದ್ದರಿಂದ ಈ ತಿದ್ದುಪಡಿಯನ್ನು ಅನುಮೋದಿಸಿ ಚರ್ಚೆಗೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

SRI MOHAMMAD LIAQUDIN BURANUDDIN (Bidar).—Mr. Speaker, Sir the amendment which is going to be introduced to the Karnataka Prevention of Dangerous Activities of Bootleggers, Drug offenders, Gamblers, Goondas, Immoral Traffic offenders and Slum–Grabbers Act, is in no way justifiable because from the amendment, which is going to be sought, it is clear from the wordings of the amendment that

> "Where a person has been detained in pursuance of an order of detention under sub–section (1) or sub–section (2) of Section 3, which has been made on two or more grounds, such order of detention shall be deemed to have been made separately on each of such grounds, and accordingly.–

a) such order shall not be deemed to be invalid or inoperative merely because one or some of the grounds is or are,-

i) vague:

ii) non–existent

iii) not relevant:

iv) not connected or not proximately connected with such person."

So, it goes to show that the amendment is in respect of the person who has been detained in pursuance of the order under sub-section 1 or under sub-section 2 and the sub-section 1 and 2 of section 3 and that same order is going to be re-considered. There is no separate order. My friend has argued before the House that there are two separate orders and after detention to modify than order such an amendment is being sought. It is not the true state of affairs which could be interpreted under this new amendment. So any order which is going to be passed by the Government or any officer is above accepted principal of rule of law. Whatever the order of detention the High Court has held null and void, not maintainable or set aside on some grounds. it is because the liberty of the individual is more valuable and the liberty of the persons cannot be given in the hands of the police. Police are the persons who arein charge of the law and order situation. The cannot act oppressi vely against the citlzens, because if any person is going to be detained, there should be some material, some grounds and with out material and ground no person could be detained or put behind the bars. There are various rules of various High Courts. If any person is going to be detained, there should be some materials before the officer who is going to arrest a person and he should be satisfied that such a person has committed such an offence which is injurious to the interest of the society. If the material is not there, is no such ground and if there is no satisfaction then it has to be recorded compulsorily by such an officer or the government. If my view if all these grounds are taken away at the whims and fancies of the police officers or the government any person can be kept behind the bars. According to this amendment, Section 6 A is going to be inserted. Clause (a) reads as follows :

> "(a) such order shall not be deemed to be invalid or inoperative merely because one or some of the grounds is or are-
>
> i) vague;
> ii) non-existent;
> iii) not relevant;
> iv) not connected or not proximately connected with such person

What does it mean ? What order is going to be passed ? If the order is vague, the police officer or the government will not be held liable. If the order is non-existent, even then the person can be kept behind the bars. If the order is not relevant, even then that order is valid. Moreover if that order is not connected or not proximately connected with such person even then that order is valid. We are living in a civilised society and we are respect-

ing the liberties of the individual persons. because in our Constitution the liberty of the individuals and the rights of the individuals are protected. If such a clause is introdnced then no person will be free and every person will be a victim of such an officer who acts oppressively. So, whenever the law is going to be introduced, the law will be having far-reaching consequences and it will be having permanent remedies available for the individual.

If the remedies of the individuals are taken away by an act of legislation then there will be no liberty for an individual. No person can survive that liberty in a peaceful manner. So, in my opinion this amendment which the Government is seeking is beyond the precept of the criminal Jurisprudance. In the Statement of Objects and Reasons it is said:

> "The State Government has experienced some procedural difficulty to sustain the detention orders in certain cases....."

I do not know what are those procedural difficulties. Those procedural difficulties should be enumerated. We should know those procedural difficcIties which the Government is facing when any order detaining a penson or putting a person behind the bar cannot be sustained before the Court of Law. Government should state as to what are those procedural difficulties. They should enumerate those difficulties. The House and the citizens cannot be kept in dark as to what are those procedural difficulties. Those difficulties should be enumerated. Unless those difficulties are enumerated before the House and the House is being kept in the darkness, how the discussion should take place? As a matter of rule whenever any person is going to be arrested, before arresting that person the officer who is going to arrest that man, should record certain grounds should be based on certain materials and those materials and ground should be considered. The officer should satisfy himself and the satisfaction should be recorded in writing. Unless it is done that order cannot be upheld in any court of Law. If those rules and procedure are taken away then the police officers can act according to their whims and fenciea. They can arrest a legislator. They can arrest a Minister, They can arrest any other person. We have experience that some days back Municipal President has been arrested. Our legislator Sri Beelagi's daughter was arrested. There are so many instances. There are police excesses. When the law is brought in such a fashion the citizens cannot approach the Court of Law. Even if they approach the court of law, then in the presence of such a provision of law, they cannot get any remedy.

They are claiming that there are certain technical lacuna in passing the order and after passing the order the courts of law are not upholding those orders. What are those lacunuec? Those lucanua and procedural difficulties should be enumerated. Unless thosa things are brought before the House, the discussion on this legislation cannot take place. Moreover according to our experience, the police stations are breading centres of the bootleggers, drug offenders, Immoral traffic offenders and all other offenders which are harmful to the society. The police officers and the bootleggers are having mutual conspiracies and offenders are having access to the police officials. They are sufficiently strong persons, The police officials will not arrest the bootleggeas or the habitual offenders. But, they are arresting peacful citizens. The persons who are habitual offanders, bootleggers, gamblers or whosever, are having access to the police station and not only to the Sub-Inspectors or to the Cirele Inspectors, but also to the higher officers Just like SPs and Dy. SPs. All those police officers are protecting those bootleggers and the goondas.

2–30 p. m.

Goondas are more stronger than the legislators or the municipal councillors or the newly elected mandal panchayat and zilla parishat members. They have access to the police and the police also don't listen to the legislators. They listen to the words of goondas. There is a vicious circle which is committed to connivance with the police. Unless there is connivance of the poitce, there will be no offence at all because in matters of droug offedeers and slum-grabbers, the police are assisting these goonda persons. The first step that should be taken by the government is to see that there is no link between goondas and bootleggers and police officials. There should be deterrent action and accordingly law should be framed. Unless this circious vciscle is broken no amount of legislation will be useful and it will not rescue the innocent citizens from being harassed. so, the legislation, which is going to be introduced, in my opinion, will be harmful to the society and harmful to the innocent citizens, because the stronger onewill escape from the cluthees of the police officers or the govern ment. Only innocent persons will be victimised. oppressed and harassed. If such a overriding provisions are provided in the legislation, there will be greater harm than greater benefit to the society. so, I totaly oppose this new amendment and urge that it should be dropped. If at all any amendment to the Act is going to be made, it should have clarity of mind, clarity of words and clarity of provisions. Unless that is done, this Bill cann›t be passed in this House. with these, I thank the hon. Dy. Speaker for giving me an opportunity to speak.

† ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರದವರು ತಂದಿರುವ ಈ ತಿದ್ದುಪಡಿ ಸೂಕ್ತವಾದುದ್ದು ಮತ್ತು ಸಮಂಜಸವಾದುದ್ದು, ಕಾನೂನಿನಿಂದ ತಪ್ಪಿಸಿಕೊಳ್ಳದ ರೀತಿಯಲ್ಲಿ ಅಂತಹ ಮನುಷ್ಯನನ್ನು ಜೆಟಿನ್ಯು ಮಾಡಬೇಕು ಎನ್ನುವ ಉದ್ದೇಶದಿಂದ ತಂದಿರುವ ತಿದ್ದುಪಡಿಯನ್ನು ನಾನು ಅನುಮೋದನೆ ಮಾಡುತ್ತೇನೆ. ಈಗ ಮಾತನಾಡಿದ ಸನ್ಮಾನ್ಯ ಸದಸ್ಯರು ನಮ್ಮ ಈ ಸಿವಿಲೈಸ್ಡ್ ಸೊಸೈಟಿಯಲ್ಲಿರುವುದರಿಂದ ಈ ತಿದ್ದುಪಡಿ ತರಬಾರದು ಎನ್ನುವ ರೀತಿಯಲ್ಲಿ ಮಾತನಾಡಿದರು. ಸಿವಿಲೈಸ್ಡ್ ಸೊಸೈಟಿ ಎನ್ನುವ ಅರ್ಥ ಬಹಳ ಮಟ್ಟಿಗೆ, ಈ ಕೆಲವು ಕೇಸ್‌ಗಳಿಗೆ ಅನ್ವಯವಾಗಲಾರದು. ಉದಾಹರಣೆಗೆ ಒಬ್ಬ ಡಿಐಜಿಯವರನ್ನು ಪೋಲೀಸ್ ಸ್ಟೇಷನ್‌ನಲ್ಲಿ ಕಪಾಳಕ್ಕೆ ಹೊಡೆಯುವುದು, ರಸ್ತೆಯಲ್ಲಿ ಹೋಗುವ ಹೆಣ್ಣು ಮಕ್ಕಳನ್ನು ಎಳೆದು ಕಾರಿನಲ್ಲಿ ಹಾಕಿಕೊಂಡು ಹೋಗಿ ಕಾನೂನು ಬಾಹೀರ ಕೃತ್ಯಗಳನ್ನು ನಾವು ಮಾಡುತ್ತೇವೆ. ನಾವು ಮಾಡುವುದೇ ಕಾನೂನು ಬದ್ಧ ಎಂದು ತಿಳಿದುಕೊಳ್ಳಬೇಕು ಎಂದು ಹೇಳುವಂಥ ಈ ಜನ ಸಿವಿಲೈಸ್ಡ್ ಸೊಸೈಟಿಯಲ್ಲಿದ್ದವರು ಎಂದು ಹೇಳಬಹುದೇ ? ಸಮಾಜದಲ್ಲಿ ಒಳ್ಳೆಯ ಸೊಸೈಟಿ ನಿರ್ಮಾಣ ಮಾಡಬೇಕಾದರೆ ಆ ಸೊಸೈಟಿಯನ್ನು ತಿದ್ದತಕ್ಕ ಜನ ಒಂದು ಕಡೆ, ಅದನ್ನು ಹಾಳು ಮಾಡತಕ್ಕೆ ಜನ ಇನ್ನೊಂದುಕಡೆ. ಸರ್ಕಾರದವರು ಈ ತಿದ್ದುಪಡಿಯನ್ನು ತಂದಿರುವುದು, ಯಾರಾದರೂ ಸಮಾಜದಲ್ಲಿ ದ್ರೋಹ ಕೆಲಸ ಮಾಡಿದರೆ ಅವರನ್ನು ಜೆಟಿನ್ಯು ಮಾಡಿ ಇಟ್ಟು ಸಮಾಜದಲ್ಲಿ ಸತ್ಕತೆಯಿಂದ, ಶಾಂತಿಯಿಂದ ಬಾಳತಕ್ಕ ಜನಗಳಿಗೆ ರಕ್ಷಣೆ ಕೊಡತಕ್ಕ ಈ ಕ್ರಮವನ್ನು ದುರುದ್ದೇಶದಿಂದ ಅಲ್ಲ ಸದುದ್ದೇಶದಿಂದ ತಂದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಸತ್ಯವನ್ನು ಹೇಳಿದರು, ಅದಕ್ಕಾಗಿ ಅಭಿನಂದಿಸುತ್ತೇನೆ.

ಶ್ರೀ ಬಿ. ಜಿ. ಕೊಟ್ರಪ್ಪ.—ನಾಲಿಗೆ ಸ್ವಲ್ಪ ವ್ಯತ್ಯಾಸವಾಗುತ್ತದೆ. ಅದಕ್ಕೆ ತಮಗೆ ಉತ್ತರ ಹೇಳುತ್ತೇನೆ.

ದುರುದ್ದೇಶದಿಂದ ತಂದಿಲ್ಲ ಸದುದ್ದೇಶದಿಂದ ಸರ್ಕಾರದವರು ತಂದಿದ್ದಾರೆನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಸರ್ಕಾರ ಒಬ್ಬ ವ್ಯಕ್ತಿಯನ್ನು ಅನೇಕ ಕಾರಣಗಳಿಂದ ಜೈಲಿಗೆ ಹಾಕಿದಾಗ, ಆತ ಕೋರ್ಟ್ ಮುಂದೆ ಹೋದಾಗ, ಯಾವುದೇ ತಾರೀಖು ಇಲ್ಲ, ಮಾಹಿತಿ ಇಲ್ಲ ಎಂದು ಕೋರ್ಟಿನವರು ಬಿಡುಗಡೆ ಮಾಡಿದರೆ ಆತ ಮತ್ತೆ ಮೀಸೆ ತಿರುಗಿಸಿಕೊಂಡು, ಹೆಚ್ಚು ದೌರ್ಜನ್ಯ ಮಾಡುವಂಥ ಪ್ರವೃತ್ತಿಯ ಮನುಷ್ಯನಾಗುತ್ತಾನೆ. ಈ ಎಲ್ಲಾಕಾರಣಗಳನ್ನು ಮನಗಂಡು, ಸಮಾಜದ್ರೋಹಿಗಳನ್ನು ಬಿಡುಗಡೆ ಮಾಡಬಾರದೆಂದೂ, ಅಂತವರನ್ನು ಬಿಡುಗಡೆ ಮಾಡಿದರೆ, ಇನ್ನೂ ಹೆಚ್ಚಿನ ದ್ರೋಹಿಗಳಾಗುತ್ತಾರೆಂದೂ ಈ ಒಂದು ತಿದ್ದುಪಡಿಯನ್ನೂ ತಂದು ಆ ಮೂಲಕ ಅವರನ್ನು ಒಳಗೆ ಹಾಕತಕ್ಕ ಕೆಲಸ ಮಾಡಲಾಗಿದೆ. ಇದರಿಂದ ಏನು ತೊಂದರೆಯಾಗುತ್ತದೆಯೋ ನನಗೆ ಅರ್ಥವಾಗುತ್ತಿಲ್ಲ, ಸಮಾಜ ದ್ರೋಹಿಗಳನ್ನು ಬೆಳೆಸಬೇಕೆಂದು ವಿರೋಧ ಪಕ್ಷದವರ ಇಚ್ಛೆ ಇದೆಯೇ ಹೈಕೋರ್ಟಿನವರು ತಿರಸ್ಕಾರ ಮಾಡಿದರೆ. ಇಂಥವರನ್ನು ಬೆಳೆಸಬೇಕೆಂಬ ಪ್ರವೃತ್ತಿ ಏನಾದರೂ ಇದ್ದು ಅದಕ್ಕಾಗಿ ವಿರೋಧ ಮಾಡುತ್ತಿದ್ದಾರೆಂದು ಭಾವಿಸುವುದೇ ? ಒಂದು ಕಡೆ ಸಮಾಜ ಚೆನ್ನಾಗಿರಬೇಕು ಪರಿಪುಷ್ಟವಾಗಿ ಸಮಾಜವನ್ನು ಬೆಳೆಸಬೇಕು, ತಿದ್ದಬೇಕು, ಸ್ವಲ್ಪ ಮಟ್ಟಿಗೆ ತಹಬಂದಿಗೆ ತರಬೇಕೆಂದು ತಿದ್ದುಪಡಿ ತಂದರೆ, ಅದಕ್ಕೆ ವಿರೋಧ ಮಾಡುವುದು ಸೌಜನ್ಯ ವಲ್ಲ. ಇದರಿಂದ ಶಾಸಕರುಗಳಿಗಾಗಲಿ ಎಂ. ಪಿ. ಗಳಿಗಾಗಲಿ, ತೊಂದರೆಯಾಗಿದ್ದರೆ ಹೇಳಲಿ. ಒಬ್ಬ ಮನುಷ್ಯನನ್ನು ಸ್ಥಾನ ಬಲದ ಮೇಲೆ ಒಳ್ಳೆಯ ಮನುಷ್ಯ ಎಂದು ಹೇಳುವುದಕ್ಕೆ ಬರುವುದಿಲ್ಲ. ದುರ್ಗುಣ ಇರತಕ್ಕ ವ್ಯಕ್ತಿಗಳನ್ನು ಯಾವ ಅಂತಸ್ತು ಮತ್ತು ಮಟ್ಟವನ್ನು ನೋಡದೆ, ಸರಿಯಾದ ರೀತಿಯಲ್ಲಿಡುವುದಕ್ಕೆ ಕಾನೂನು ಬದ್ಧವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಸರ್ಕಾರ ಹೊರಟಿರುವಾಗ ಸಾಮಾನ್ಯವಾಗಿ ಒಪ್ಪತಕ್ಕ ಸೌಜನ್ಯ ಬರಬೇಕು. ಸಮಾಜಕ್ಕೆ ಕಂಠಕರಾದಂಥ ವ್ಯಕ್ತಿಗಳನ್ನು ಒಳಗೆ ಹಾಕುವುದರಿಂದ ಸಮಾಜದಲ್ಲಿ ಒಳ್ಳೆ ಜನ ಶಾಂತರೀತಿಯಿಂದ ಬಾಳಲಿಕ್ಕೆ ಅವಕಾಶ ಮಾಡಿದಂತಾಗುತ್ತದೆ, ಇದರ ಬಗ್ಗೆ ಶಹಬಾಷ್‌ಗಿರಿ ಕೊಡತಕ್ಕಂಥ ಪ್ರವೃತ್ತಿ ಬರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ ಹೋದ ಸಲ ಮಾನ್ಯ ಮಂತ್ರಿಗಳ ಕೊಟ್ಟಂತಹ ಅಂಕಿಸಂಖ್ಯೆ ಪ್ರಕಾರ ೨೬ ಜನರನ್ನು ಈ ಕಾನೂನು ಪ್ರಕಾರ ಡಿಟೈನ್ ಮಾಡಿದ್ದರು. ೨೬ ಜನರಲ್ಲಿ ೧೫ ಜನರನ್ನು ಸರ್ಕಾರದವರೇ ಬಿಡುಗಡೆ ಮಾಡಿದ್ದಾರೆ. ೪ ಜನರನ್ನು ಸಲಹಾ ಮಂಡಲಿಯವರು ಬಿಡುಗಡೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಿದ್ದಾರೆ. ೪ ಜನರನ್ನು ಸಲಹಾ ಮಂಡಲಿಯವರು ಬಿಡುಗಡೆ ಮಾಡಿದ್ದಾರೆ. ಉಳಿದ ಎರಡು ಜನರನ್ನು ಹೈಕೋರ್ಟಿನವರು ಬಿಡುಗಡೆ ಮಾಡಿದ್ದಾರೆ. ಇನ್ನಿಬ್ಬರನ್ನು ಬಿಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ೧೯ ಜನರಿಗೆ ನೀವೇ ಬಿಡುಗಡೆ ಮಾಡಿ, ಪುನಃ ಈ ಕಾನೂನು ತರತಕ್ಕಂಥ ಅವಶ್ಯಕತೆ ಇತ್ತೆ ? ಗೂಂಡಾಗಳು ನಿಮ್ಮ ಪರವಾಗಿ, ನಿಮಗೆ ಸಪೋರ್ಟ್ ಮಾಡುವವರು ಇದ್ದಾರೋ ಏನೋ ಈ ಕಾನೂನು ತಂದಾಗ ನಮ್ಮ ಕೈ ಭದ್ರಪಡಿಸಿ ಏಂದು ಹೇಳಿದಮೇಲೆ ನಾವು ಒಮ್ಮತದಿಂದ ಒಪ್ಪಿಗೆ ಕೊಟ್ಟು, ಕಾನೂನು ನಿಮ್ಮ ಕೈಗೆ ಕೊಟ್ಟಿವು. ಪುನಃ ನಮ್ಮ ಕೈ ಭದ್ರಪಡಿಸಿ ಎಂದು ತಿದ್ದುಪಡಿ ತಂದಿದ್ದೀರಿ.

ಶ್ರೀ ಎಂ. ರಾಮಪ್ಪ.—ಆವರಿಗೆ ಬೇಕಾಗಿರುವಂತಹ ಕಾನೂನು ತಂದು ಎಂ.ಎಲ್.ಎ. ಅವರನ್ನು ಒಳಗೆ ಹಾಕಲಿಕ್ಕೆ ನೋಡುತ್ತಿದ್ದಾರೆ. ಕೆಲವರಿಗೆ ಸ್ಲಮ್ ಲಾರ್ಡ್ ಎಂದು ಮಾಡಿದ್ದರು, ೨೦ ಸಾವಿರ ರೂಪಾಯಿ ಕೊಡಿ, ಇಲ್ಲದೇ ಇದ್ದರೆ ಡಿಸ್ಟ್ರಿಕ್ಟ್‌ನಿಂದ ಹೊರಗಡೆ ಹಾಕುತ್ತೇವೆಂದು ಹೇಳುತ್ತಿದ್ದರು. ಜನತಾ ಪಕ್ಷದವರು ಎಷ್ಟೋ ಗುಡಿಸಲು ಹಾಕಿದ್ದಾರೆ, ಅವರುಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಇವರ ಕೈಯಲ್ಲಿ ಏತಕ್ಕೆ ಅಧಿಕಾರ ಕೊಡಬೇಕು ? ಇವರ ಕೈಯಲ್ಲಿ ಏನೂ ಆಗುವುದಿಲ್ಲ ಎಂದು ನಿರ್ಣಯ ಮಾಡಿಕೊಂಡಿದ್ದೇವೆ.

ಶ್ರೀ ಬಿ.ಜಿ. ಕೊಟ್ರಪ್ಪ.—ಸರ್ಕಾರ ನ್ಯಾಯಬದ್ಧವಾಗಿ ಮಾಡುತ್ತದೆ. ಸನ್ಮಾನ್ಯ ಸದಸ್ಯರು ಬಿಡುಗಡೆ ವಿಷಯ ಹೇಳಿದರು, ಸೌಜನ್ಯ ರೀತಿಯಿಂದ ನೋಡಿದರೆ ಸರ್ಕಾರ ಎಷ್ಟು ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ತಿಳಿದುಕೊಳ್ಳಬೇಕು. ಹೈಕೋರ್ಟಿನಲ್ಲಿ ಯಾವುದು ತಪ್ಪು ಎಂದು ಹೇಳಿದ್ದಾರೆ ಅದರ ಪ್ರಕಾರ ಬಿಡುಗಡೆ ಮಾಡುವ ಸೌಜನ್ಯತೆ ಈ ಸರ್ಕಾರಕ್ಕೆ ಇದೆ. ಕೋರ್ಟಿನ ವಿಚಾರಕ್ಕೆ ಮನ್ನಣೆ ಕೊಡತಕ್ಕ ಸರ್ಕಾರ ಇದೆ ಅದನ್ನು ಗಣನೆಗೆ ತೆಗೆದುಕೊಳ್ಳಬೇಕು. ಒಂದಲ್ಲ ಒಂದು ರೀತಿಯಿಂದ ಬಿಡುಗಡೆ ಮಾಡಿದರೂ ಪುನಃ ಡೆಟಿನ್ಯೂ ಮಾಡಲಿಕ್ಕೆ ತಿದ್ದುಪಡಿ ತಂದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ—ನೀವು ಬಿಡುಗಡೆ ಮಾಡಿದರೆ ಒಳ್ಳೆಯವನಾಗುತ್ತಾನೆ ಅಲ್ಲವೇ ? ಒಳಗಡೆ ಇದ್ದರೆ ಅವನು ಕೆಟ್ಟವನಾಗಿರುತ್ತಾನೆ ಅಲ್ಲವೇ?

ಶ್ರೀ ಬಿ.ಜಿ. ಕೊಟ್ರಪ್ಪ.—ಆದರ ಬಗ್ಗೆ ಎಕ್ಸ್‌ಪ್ಲನೇಟರಿ ಸ್ಟೇಟ್‌ಮೆಂಟಿನಲ್ಲಿ ಹೇಳಿದ್ದಾರೆ. Provided that in a case where no fresh facts have arisen after the revocation or expiry of the earlier detention order made against such person, the maximum period for which such person may be detained in pursuance of the subsequent detention order shall in no case, extend beyond the expiry of a period of twelve months from the date of detention under the earlier detention order." ಆದ್ದರಿಂದ ಮಹಾರಾಜರ ಕಾಲದಲ್ಲಿ ಇದ್ದ ಹಾಗೆ ಎಷ್ಟು ವರ್ಷ ಆದರೂ ಇಟ್ಟುಕೊಳ್ಳುವ ಭಾವನೆ ನಮ್ಮಲ್ಲಿ ಇಲ್ಲ. ಪ್ರಜೆಗಳ ಕ್ಷೇಮ ನೋಡತಕ್ಕ ಸರ್ಕಾರ ಸರ್ವರೂ ಶಾಂತಿಯಿಂದ ಬಾಳಬೇಕೆಂದು ಮಾಡಿರತಕ್ಕ ಸರ್ಕಾರ ಇದರಲ್ಲಿ ಭಯ ಪಡಬೇಕಾದುದು ಇಲ್ಲ. ನ್ಯಾಯವಾಗಿ ಬಾಳತಕ್ಕ ವ್ಯವಸ್ಥೆ ಮಾಡ ಮಂತಾದ್ದು ಇದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಕೊಟ್ರಪ್ಪನವರು ಮಂತ್ರಿಗಳು ಆಗುತ್ತಾರೆಂದು ಕಾಣುತ್ತದೆ.

ಶ್ರೀ ಎಂ. ರಾಮಪ್ಪ.—ನಮ್ಮ ಮೇಲೆ ಸುಳ್ಳು ಕೇಸ್ ಹಾಕಿದ್ದರು.

ಶ್ರೀ ಬಿ.ಜಿ. ಕೊಟ್ರಪ್ಪ.—ಈ ತಿದ್ದುಪಡಿಯನ್ನು ಒಂದು ಟೆಕ್ನಿಕಲ್ ಡಿಫೆಕ್ಟ್‌ನಿಂದ ತರಲಾಗಿದೆ. ಇನ್ ಆರ್ಡರ್ ಟು ಕ್ಯೂರ್ ದಿ ಟೆಕ್ನಿಕಲ್ ಲಕೂನ. ಹೊಸದಾಗಿ ಏನೂ ಮಾಡಲಿಕ್ಕೆ ಹೋಗಿಲ್ಲ. ಆನೇಕ ತಪ್ಪುಗಳನ್ನು ಎತ್ತಿ ತೋರಿಸುವಾಗ ಅದನ್ನು ತಿದ್ದುಪಡಿ ಮಾಡತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ. ಮಾನ್ಯ ರಾಚಯ್ಯನವರು ಬಹಳಷ್ಟು ಜಾಗ್ರತೆಯಿಂದ ಕೋರ್ಟಿನ ತೀರ್ಪಿಗೆ ಮನ್ನಣೆ ಕೊಟ್ಟು ತಿದ್ದುಪಡಿಯನ್ನು ತಂದಿದ್ದಾರೆ. ಈ ತಿದ್ದುಪಡಿ ಮಾಡುವುದರಿಂದ ಭಯ ನಮ್ಮಲ್ಲಿ ಬರುತ್ತದೆ ಎಂದು ಹೇಳುವುದು ಉಚಿತ್ಯ ಅಲ್ಲ. ಈ ತಿದ್ದುಪಡಿ ಮಾಡುವುದರಿಂದ ಸಮಾಜದಲ್ಲಿ ಶೋಷಣೆ ಮಾಡತಕ್ಕ, ದೌರ್ಜನ್ಯ ಮಾಡತಕ್ಕ ಜನರನ್ನು ಬಲಿ ಹಾಕಿ ಒಳಗೆ ಇಟ್ಟು ಸಮಾಜದಲ್ಲಿ ಶಾಂತಿ, ಸೌಜನ್ಯದಿಂದ ಬಾಳತಕ್ಕದ್ದು ನಿರ್ಮಾಣ ಮಾಡಲಿಕ್ಕೆ ಆಗುತ್ತದೆ. ಆದುದರಿಂದ ಸರ್ಕಾರ ತಂದಿರತಕ್ಕ ತಿದ್ದುಪಡಿಯನ್ನು ನಾನು ಅನುಮೋದನೆ ಮಾಡುತ್ತೇನೆ.

† ಶ್ರೀ ಚಂದ್ರಕಾಂತ ಜಿ. ಬೆಲ್ಲದ್ (ಧಾರವಾಡ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರಾದ ರಾಚಯ್ಯನವರು ಗೂಂಡಾ ಆ್ಯಕ್ಟ್‌ಗೆ ಕೆಲವು ತಿದ್ದುಪಡಿಗಳನ್ನು ತಂದಿರುವುದಕ್ಕೆ ನಾನು ಸ್ವಾಗತಿಸುತ್ತೇನೆ. ಇದೊಂದು ಬಹಳ ಉಚಿತವಾದ ತಿದ್ದುಪಡಿಯಾಗಿದೆ. ಈಗಾಗಲೇ ಈ ಸಮಾಜದಲ್ಲಿ ಆನೇಕ ದೃಷ್ಟಿಯಿಂದ, ಆನೇಕ ದಿವಸಗಳಿಂದ ನಾನು ನೋಡುತ್ತಿರುವಂತೆ ಅತ್ಯುತ್ತಮವಾದ ಆನೇಕ ಕಾನೂನುಗಳಿದ್ದರೂ ಸಹಿತ ಗೂಂಡಾಗಳು, ಆನೇಕ ಸಮಾಜ ದ್ರೋಹಿಗಳು, ಸಮಾಜ ವಿಚ್ಛಿದ್ರಕಾರಕ ಶಕ್ತಿಗಳು ಬೆಳೆದು ಬಂದಿವೆ ಎಂಬುದನ್ನು ನಮ್ಮ ಸರ್ಕಾರ ತಿಳಿದಮೇಲೆ ಇಂಥ ಶಕ್ತಿಗಳನ್ನು ಮಟ್ಟ ಹಾಕಬೇಕೆಂಬ ಸಲುವಾಗಿ, ಸಮಾಜದ ಹಿತವನ್ನು ಕಾಪಾಡುವ ಸಲುವಾಗಿ ಈ ಕಾನೂನನ್ನು ತಂದಿದೆ. ಈ ಕಾನೂನನ್ನು ಕಾರ್ಯಗತ ಮಾಡಿದ ಮೇಲೆ ಅನೇಕ ಜನ ಗೂಂಡಾಗಳು ಈ ಕಾನೂನು ಪರಿಮಿತಿಯೊಳಗೆ ಸಿಕ್ಕಿ ಸಣ್ಣ ಪುಟ್ಟ ಕಾರಣಗಳಿಂದ ಹೊರಗೆ ಬರುತ್ತಿದ್ದಾರೆ. ಇದನ್ನು ನೋಡಿ ನಮ್ಮ ಸಮಾಜದ ಹಿತವನ್ನು ಕಾಯಬೇಕೆಂಬ ಉದ್ದೇಶದಿಂದ ಈ ಕಾನೂನು ತಂದಿದೆ. ಇದನ್ನು ತರದಿದ್ದರೆ ಗೂಂಡಾಗಳು ಸಮಾಜದ ಸ್ವಾಸ್ಥ್ಯವನ್ನು ಇನ್ನೂ ಕೆಡಿಸುವುದಕ್ಕೆ ಹೆಚ್ಚಿನ ಅವಕಾಶಗಳಿದ್ದವು. ಸರ್ಕಾರೀ ಅಧಿಕಾರಿಗಳು ನಮ್ಮ ಸಮಾಜದ ಹಿತವನ್ನು ಸರಿಯಾಗಿ ಕಾಯುದೇ ಇರುವುದರಿಂದ ಹೆಚ್ಚು ಹೆಚ್ಚು ಸಮಾಜ ಘಾತುಕ ಶಕ್ತಿಗಳು ಬೆಳೆಯುತ್ತಿವೆಯೆಂದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಆದ್ದರಿಂದ ಈಗಿರತಕ್ಕ ಕಾನೂನುಗಳನ್ನು ಸರ್ಕಾರೀ ಅಧಿಕಾರಿಗಳು ಸರಿಯಾಗಿ ಅರ್ಥ ಮಾಡಿಕೊಂಡು ಸಮಾಜದ ಹಿತದೃಷ್ಟಿಯಿಂದ ಕ್ರಮ ತೆಗೆದುಕೊಂಡರೆ ಜನರಿಗೆ ಒಳ್ಳೆಯದಾಗುತ್ತದೆ. ಇವತ್ತು ಈ ತಿದ್ದುಪಡಿಯನ್ನು ಸರ್ಕಾರದವರು ಏನು ತಂದಿದ್ದಾರೆ ಇದನ್ನು ನಾನು ಸ್ವಾಗತಿಸಿ ಇದರಿಂದ ನಮ್ಮ ಸಮಾಜಕ್ಕೆ ಒಳ್ಳೆಯದಾಗುತ್ತದೆಂದು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಯು. ಭೂಪತಿ (ಸಂಡೂರು),—ಮಾನ್ಯ ಅಧ್ಯಕ್ಷರೆ, ಗೂಂಡಾ ಕಾಯಿದೆ ಒರಿಜಿನಲ್ ಆಗಿ ಸದನದ ಮುಂದೆ ಬಂದಾಗ ನಾನು ಇದರ ಬಗ್ಗೆ ಕಳೆದ ಸಾರಿಯೇ ಒಂದು ತಿದ್ದುಪಡಿಯನ್ನು ತಮಗೆ ಕಳುಹಿಸಿಕೊಟ್ಟಿದೆ. ಆದರೆ ಅದನ್ನು ತಾವು ತಿರಸ್ಕಾರ ಮಾಡಿದಿರಿ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಈ ಸಮಾಜದಲ್ಲಿ ಎಲ್ಲಿಯವರೆಗೆ ಈ ಗೂಂಡಾಗಳನ್ನು ಸಾಕುವವರು ಇರುತ್ತಾರೋ ಅಲ್ಲಿಯವರೆಗೂ ಇಂಥ ಗೂಂಡಾ ಕಾಯಿದೆಗಳನ್ನು ಎಷ್ಟು ಮಾಡಿದರೂ ಯಾವುದೇ ಪ್ರಯೋಜನವೂ ಆಗುವುದಿಲ್ಲ.

ಇನ್ನೊಂದು ವಿಚಾರ ಎಂದರೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಬಂದಿರತಕ್ಕ ಹಲವಾರು ಕಾಯಿದೆಗಳನ್ನು ನೋಡಿದರೆ, ನಮ್ಮ ದೇಶಕ್ಕೆ ಎಂಥ ಕಾನೂನುಗಳು ಬೇಕೆಂದು ನಿಜವಾದ ಅರ್ಥದಲ್ಲಿ ಯೋಚನೆ ಮಾಡಿದರೆ ಪೋಲೀಸರಿಗೆ ಆಥವಾ ಆಧಿಕಾರ ವರ್ಗಕ್ಕೆ ಎಷ್ಟು ಅಧಿಕಾರ ಇದೆಯೋ ಇದಕ್ಕಿಂತ ಹೆಚ್ಚಿಗೆ ಅಧಿಕಾರವನ್ನು ಕೊಡತಕ್ಕ ಕಾನೂನುಗಳಿವೆ. ಉದಾಹರಣೆಗೆ ಹೇಳುವುದಾದರೆ ನ್ಯಾಷನಲ್ ಸೆಕ್ಯುರಿಟಿ ಆಕ್ಟ್ ಮುಂತಾದ ದೊಡ್ಡ ದೊಡ್ಡ ಕಾಯಿದೆಗಳನ್ನು ಇಟ್ಟುಕೊಂಡು, ಅತ್ಯುತ್ತಮವಾದ ಆಸ್ತ್ರಗಳನ್ನು ಪೋಲೀಸರು ತಮ್ಮ ಕೈಯಲ್ಲಿಟ್ಟುಕೊಂಡಿದ್ದರೂ ಕೂಡ ಈ ಸರ್ಕಾರ ಸರಿಯಾದ ರೀತಿಯಲ್ಲಿ ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಗ್ರೌಂಡ್ಸ್ ಆಫ್ ಡಿಟೆನ್‌ಷನ್‌ನ್ನು ಯಾವ ರೀತಿ ಪರ್ಸ್ಯೂ ಮಾಡುತ್ತಿದ್ದಾರೆ

> " Where a person has been detained in pursuance of an order of detention under sub-section (1) or sub-section (2) of section 3, which has been made on two or more grounds, such order of detention shall be deemed to have been made separtely on each of such grounds, accordingly,
> (a) such order shall not be deemed to be invalid or inoperative merely because one or some of the grounds is or are,
>
> (i) vague ;
> (ii) non-existent ;
> (iii) not relevant ;

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

(iv) not connected or not proximately connected with such person ; or

(v) invalid for any other reason whatsoever ; and it is not, therefore, possible to hold that the Government or the officer making such order would have been satisfied as provided in sub-section (1) of section 3 with reference to the remaining ground or grounds and made the order of detention."

ಮಾನ್ಯ ಅಧ್ಯಕ್ಷರೇ ಇದರಲ್ಲಿ ಇವರು ಕೊಟ್ಟಿರತಕ್ಕಂಥ ರೀತಿಯನ್ನು ನೋಡಿದರೆ ಹೆಚ್ಚು ಕಡಿಮೆ ಹೈಕೋರ್ಟಿನಲ್ಲೂ ಇರತಕ್ಕಂಥ ಆಕ್ಟ್‌ನ್ನು ಕಡಿಮೆ ಮಾಡುವ ರೀತಿಯಲ್ಲಿ ಇದೆ. ವೇಗ್ ಆಗಿ ಆಕ್ಟ್ಯಯಲಿ ಯಾರೇ ಒಬ್ಬ ಮನುಷ್ಯನನ್ನು ಅರೆಸ್ಟ್ ಮಾಡಬೇಕೆಂದರೆ ನೋಟೀಸ್ ಇಶ್ಯೂ ಮಾಡ ಬೇಕು. ರೀಸನ್ ಆಫ್ ಡಿಟೆನ್‌ಷನ್ ಕೇಳಬೇಕು, ಅದನ್ನು ಯಾವುದನ್ನು ಮಾಡದೆ ಏನಾದರೂ ಅಮೆಂಡ್‌ಮೆಂಟ್‌ನ್ನು ಕೊಟ್ಟರೆ ತಮಗೆ ಇಷ್ಟ ಬಂದ ರೀತಿಯಲ್ಲಿ ಯಾರನ್ನು ಬೇಕಾದರೂ ಅರೆಸ್ಟ್ ಮಾಡಬಹುದು. ಅರೆಸ್ಟ್ ಮಾಡುತ್ತೇವೆಂದು ಈಗಾಗಲೇ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಟ್ಟಿರುವ ಪ್ರಕಾರ ಮಾನ್ಯ ಹಾರ್ಗೆಯವರು ಸುಮಾರು ೧೫ ಜನರನ್ನು ಅರೆಸ್ಟ್ ಮಾಡಿ ಬಿಡುಗಡೆ ಮಾಡಿದ್ದಾರೆಂದು ಹೇಳಿದರು. ಆ ರೀತಿಯಲ್ಲಿ ಇರತಕ್ಕಂಥ ಕಾಯಿದೆಯನ್ನು ಉಪಯೋಗಿಸುವ ಸರಿಯಾದ ರೀತಿಯಲ್ಲಿ ಉಪಯೋಗಿಸದೆ ಇರುವುದರಿಂದ ಈವತ್ತಿನ ದಿವಸ ಮತ್ತೆ ಅಮೆಂಡ್‌ಮೆಂಟ್ ಮೇಲೆ ಅಮೆಂಡ್‌ಮೆಂಟ್ ತರುತ್ತಿದ್ದಾರೆ. ಒರಿಜಿನಲ್ ಆಕ್ಟ್‌ನಲ್ಲಿಯೇ ಬೇಕಾದಷ್ಟು ಅಧಿಕಾರವಿದೆ. ಪೋಲೀಸ್‌ನವರು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ನಾನು ೧೯೪೫ನೇ ಇಸವಿಯಲ್ಲಿ ಶಾಸಕನಾಗಿ ಬಂದಾಗಿನಿಂದಲೂ ನೋಡುತ್ತಿದ್ದೇನೆ. ಇಲಿಸಿಟ್ ಲಿಕ್ಕರ್ ನಮ್ಮ ಏರಿಯಾದಲ್ಲಿ ಸರಾಯಿ ಅಂಗಡಿಗಳಲ್ಲಿ ಮಾತ್ರ ಬರುತ್ತಿತ್ತು. ಈವತ್ತು ಓಣಿಗಳಲ್ಲಿ ಮನೆ ಮನೆಗಳಲ್ಲಿ ಬಟ್ಟಿ ಸಾರಾಯಿ ವಾಸನೆ ಬರುತ್ತಿರುತ್ತದೆ. ಇವರು ಬಂದಮೇಲೆ ಹೆಂಡದ ಅಂಗಡಿಗಳಿಗೆ, ಸಾರಾಯಿ ಅಂಗಡಿಗಳಿಗೆ ಸಾವಿರಗಟ್ಟಲೆ ಲೈಸೆನ್ಸ್‌ಗಳನ್ನು ಕೊಡುತ್ತಲೇ ಇರುತ್ತಾರೆ. ಇವರು ಬಂದಮೇಲೆ ಇಂಥ ಪರಿಸ್ಥಿತಿ ಬಂದಿದೆ.

ಶ್ರೀ ಡಿ.ಟಿ. ಜಯಕುಮಾರ್.—ಅದಕ್ಕೆ ತಮ್ಮ ಸಹಕಾರ ಬೇಕು, ಎಲ್ಲಿ ವಾಸನೆ ಕಂಡುಬರುತ್ತದೆ ಅದನ್ನು ಪೋಲೀಸ್ ಅಧಿಕಾರಿಗಳಿಗೆ ತಿಳಿಸಬೇಕು. ನಿಮಗೂ ಅಧಿಕಾರ ಇರುತ್ತದೆ.

ಶ್ರೀ ಯು. ಭೂಪತಿ.—ನಮಗೆ ಗೊತ್ತಿದೆ, ಪೋಲೀಸ್‌ನವರು ಏನು ಕೆಲಸ ಮಾಡುತ್ತಾರೆಂದು. ಹೀಗಿರುವುದರಿಂದ ಇದನ್ನು ಕಂಟ್ರೋಲ್ ಮಾಡಬೇಕಾದರೆ ಇಲಾಖೆ ಸರಿಯಾದ ರೀತಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡದೆಹೋದರೆ ಯಾವ ಕಾನೂನನ್ನು ತೆಗೆದುಕೊಂಡು ಬಂದರೂ ಏನೂ ಪ್ರಯೋಜನವಾಗುವುದಿಲ್ಲ. ಪದೇ ಪದೇ ತಿದ್ದುಪಡಿಗಳನ್ನು ತಂದು ಏನೇನೂ ಸಾಧನೆ ಮಾಡಿ ಕೊಳ್ಳುತ್ತೇವೆಂದು ಹೇಳಿದರೂ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಈಗಾಗಲೇ ಸಾಕಷ್ಟು ಕಾಯಿದೆಗಳು ಇರುತ್ತವೆ. ಇದನ್ನು ಅಷ್ಟಕ್ಕೆ ನಿಲ್ಲಿಸಿ, ಮತ್ತೆ ಅಮೆಂಡ್‌ಮೆಂಟ್‌ಗಳನ್ನು ತರುವುದು ಬೇಡವೆಂದು ಒತ್ತಾಯ ಮಾಡುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು).—ಮಾನ್ಯ ಉಪಸಭಾಪತಿಯವರೇ ಈ ತಿದ್ದುಪಡಿ ಮಸೂದೆಯ ಮೇಲೆ ನಿನ್ನೆಯಿಂದ ಈವತ್ತಿನವರೆಗೆ ಅನೇಕ ಜನ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗ ವಹಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಅದಕ್ಕೆ ನಾನು ವಂದನೆಗಳನ್ನು ಸಲ್ಲಿಸುತ್ತೇನೆ. ಈವತ್ತು ಪ್ರಾರಂಭ ಮಾಡಿದಂಥ ಮಾನ್ಯ ಕೋಳಿವಾಡ್‌ರವರು, ನಿನ್ನೆ ಮಾತನಾಡಿದಂಥ ಮಾನ್ಯ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಮತ್ತು ಮಾನ್ಯ ಹಾರ್ಗೆಯವರು ಆರಂಭಿಸುತ್ತಾ ಬಹುಶಃ ಬ್ರೆಕೋನಿಯನ್ ರೀತಿಯ ಕಾನೂನನ್ನು ಕೈಗೆ ಕೊಟ್ಟರೂ ಕೂಡ. ಅಂಥ ಕಾನೂನು ಯಶಸ್ವಿಯಾಗಿ ಜಾರಿಗೆ ಕೊಡುವುದಕ್ಕಾಗಲಿಲ್ಲ, ಮತ್ತೆ ಜತಕ್ಕೆ ಇವರಿಗೆ ಅಧಿಕಾರವನ್ನು ಕೊಡಬೇಕೆಂದು ಕೇಳಿದ್ದಾರೆ. ಬಹುಶಃ ಕಾನೂನನ್ನು ತಂದ ಕಾಲದಲ್ಲಿ ಇದನ್ನು ತರಬೇಕಾಗಿತ್ತು. ಇದು ಫಲನಿಷ್ಪನ್ನವಾಗಿರತಕ್ಕಂಥ ಕಾಯಿದೆಯಾಗಿದೆ. ಸಾಮಾನ್ಯವಾಗಿ ಮನುಷ್ಯರಿಗೆ ಕೊಡತಕ್ಕಂಥ ಈ ಒಂದು ವಿಚಾರಣೆ ಇಲ್ಲದೆ ಪೋಲೀಸ್ ಕಸ್ಟಡಿಗೆ ತೆಗೆದುಕೊಳ್ಳತಕ್ಕಂಥದ್ದು ನಾಗರೀಕ ಪ್ರಪಂಚಕ್ಕೆ ಒಪ್ಪತಕ್ಕಂಥದಲ್ಲವೆಂದು ಹೇಳಿದ್ದಾರೆ. ಈ ಕಾನೂನನ್ನು ಕೊಡತಕ್ಕಂಥ ಕಾಲದಲ್ಲಿ ಅನೇಕ ರೀತಿಯಾದ ಸಮಸ್ಯೆಗಳನ್ನು ವ್ಯಕ್ತ

ಪಡಿಸಿದರು. ಆದರೂ ಸಂಪೂರ್ಣವಾಗಿ ನಂಬಿಕೆಯನ್ನು ಇಟ್ಟುಕೊಂಡು ಸಮಾಜದಲ್ಲಿರತಕ್ಕಂಥ ಸಮಾಜ ಘಾತುಕ ಶಕ್ತಿಗಳು ಈ ಕ್ಯಾಟಗರಿಯಲ್ಲಿ ಯಾರು ಬರುತ್ತಾರೆ ಅವರ ವಿಷಯದಲ್ಲಿ ಸಮಾಜದಲ್ಲಿ ನೆಮ್ಮದಿ, ಶಾಂತಿಯನ್ನು ತರುವುದಕ್ಕೆ ಪ್ರಯತ್ನ ಮಾಡಲು ವಿಶ್ವಾಸವನ್ನು ಇಟ್ಟು ಈ ಕಾನೂನನ್ನು ಕೈಗೆ ಕೊಟ್ಟರು. ಬಹುಶಃ ಕಾಯಿದೆ ಪ್ರಕಾರ ವಿಚಾರಣೆ ಇಲ್ಲದೆ ಕೆಲವು ಸಮಾಜ ಘಾತುಕ ಶಕ್ತಿಗಳನ್ನು ಒಂದು ತಿಂಗಳವರೆಗೆ ಪೋಲೀಸ್ ಕಸ್ಟಡಿಯಲ್ಲಿ ಇಟ್ಟುಕೊಂಡು ಸಮಾಜದಲ್ಲಿ ಆಗತಕ್ಕಂಥ ಅನೇಕ ಆಘಾತ ಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಲಿ ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಇದರಲ್ಲಿ ಬಹುಶಃ ಒಂದು ವರ್ಷ ಕಸ್ಟಡಿಯಲ್ಲಿ ಮುಂದುವರಿಸಿಕೊಂಡು ಹೋಗತಕ್ಕಂಥ ಅಧಿಕಾರ ಇರುತ್ತದೆ. ಕಾಯಿದೆ ಪ್ರಕಾರ ಕೇವಲ ಸಬ್‌ಇನ್ಸ್‌ಪೆಕ್ಟರವರಿಗೆ ಅಧಿಕಾರವನ್ನು ಕೊಟ್ಟಿಲ್ಲ. ಬಹುಶಃ ಜಿಲ್ಲಾ ಮ್ಯಾಜಿಸ್ಟ್ರೇರಿಗೂ ಕೂಡ ಅಧಿಕಾರವನ್ನು ಕೊಟ್ಟಿರುವುದರಿಂದ ಅವರು ಡಿಟೆನ್‌ಷನ್ ಆರ್ಡರ್ ಮಾಡಿ ಸರ್ಕಾರದ ಅನುಮೋದನೆಗೆ ಕಳುಹಿಸಿಕೊಡುತ್ತಾರೆ. ಅನುಮೋದನೆಗೆ ಕಳುಹಿಸತಕ್ಕ ಸಂದರ್ಭದಲ್ಲಿ ಸೆಕ್ಷನ್ ೧೭-೨-೩ರಲ್ಲಿ ಏನು ನಿಯಮಾವಳಿಗಳಿವೆ ಅದರ ಪ್ರಕಾರ ಮಾಡಬೇಕೆಂದು ಈ ಕಾಯಿದೆ ಪ್ರಕಾರ ಅವರಿಗೆ ಅವಕಾಶ ಕಲ್ಪಿಸಿದ್ದೇವೆ. ಅಲ್ಲ ಒಂದೆರಡು ತಪ್ಪುಗಳನ್ನು ಮಾಡಿದರೆ ಅಥವಾ ಕೆಲವು ಕಾರಣಗಳಿಂದ ಸಕಾರಣಗಳನ್ನು ಕೊಡದೆ ಇದ್ದರೆ ಅಡ್ವೈಸರಿ ಬೋರ್ಡಿಗೆ ಕಳುಹಿಸಬೇಕಾಗುತ್ತದೆ. ಅಡ್ವೈಸರಿ ಬೋರ್ಡಿನಲ್ಲಿ ಹೈಕೋರ್ಟಿನ ಜಡ್ಜ್ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರು ಇರುತ್ತಾರೆ. ಅವರು ಕಾಯಿದೆಯನ್ನು ಜಾರಿಗೆ ತರತಕ್ಕ ಕಾಲದಲ್ಲಿ ಡಿಟೆನ್‌ಷನ್ ಆರ್ಡರ್ ಕಾಯಿದೆಗನುಗುಣವಾಗಿದೆಯೋ ಇಲ್ಲವೇ ಎಂಬುದನ್ನು ನೋಡಿ, ಅದಕ್ಕನುಗುಣವಾಗದಿದ್ದರೆ ಡಿಟೆನ್‌ಷನ್ ಆರ್ಡರನ್ನು ವಜಾ ಮಾಡುತ್ತಾರೆ. ವಜಾ ಮಾಡಿದ ತಕ್ಷಣ ಬಿಡಬೇಕು. ಆದು ತಪ್ಪಿ ಹೈಕೋರ್ಟಿಗೆ ಹೋದ ಸಂದರ್ಭದಲ್ಲಿ ಅವರು ಒಂದಲ್ಲ ನಾಲ್ಕು ಕಾರಣಗಳನ್ನು ಹಾಕಿ ಯಾವುದಾದರೂ ಒಂದು ಕಾರಣ ತಪ್ಪಾಗಿದ್ದರೆ ಡಿಟೆನ್‌ಷನ್ ಆರ್ಡರನ್ನು ವಜಾ ಮಾಡತಕ್ಕುದ್ದು. ಅನೇಕ ಸಮಾಜಘಾತಕ ಕೃತ್ಯಗಳಲ್ಲಿ ತೊಡಗಿರತಕ್ಕವರೆಂದು ೨೬ ಜನರನ್ನು ತೆಗೆದುಕೊಂಡ ಪೈಕಿ ಬೇರೆ ಬೇರೆ ಕಾರಣಗಳಿಗೋಸ್ಕರ ಅವರನ್ನು ಬಿಡುಗಡೆ ಮಾಡಬೇಕಾಗಿ ಬಂತು. ಹೈಕೋರ್ಟಿನ ಕೆಲವು ಆದೇಶದ ಪ್ರಕಾರ ಯಾವ ಕಾರಣಕ್ಕೋಸ್ಕರ ಡಿಟೆನ್‌ಷನ್ ಆರ್ಡರನ್ನು ವಜಾ ಮಾಡಿದ್ದಾರೆಂಬುದನ್ನು ತಿಳಿದುಕೊಂಡು, ಮತ್ತೆ ಹೈಕೋರ್ಟಿನಲ್ಲಿ ಆದೇ ತಪ್ಪನ್ನು ಮಾಡಿದರೆ ತಪ್ಪಾಗುತ್ತದೆಂದು ಅಲ್ಲಿ ತೀರ್ಮಾನ ಮಾಡಿ ಕೆಲವರನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ. — ಹೈಕೋರ್ಟಿನ ತೀರ್ಮಾನ ಬಂದಮೇಲೆ ಎಷ್ಟು ಜನರನ್ನು ಬಿಡುಗಡೆ ಮಾಡಿದ್ದೀರಿ ? ಆದು ಬರುವುದಕ್ಕೆ ಮೊದಲು ಎಷ್ಟು ಜನರನ್ನು ಬಿಡುಗಡೆ ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—೪೨ ಜನರ ಪೈಕಿ detention order approved by the government 19, the detention order has not been approved by the government 23. ಇಂಥ ಕಾಲದಲ್ಲಿ ಅಪ್ರೂವ್ ಮಾಡಿದರೆ ತಪ್ಪಾಗುತ್ತದೆಂದು ಒಪ್ಪಿಗೆ ಕೊಡಲಿಲ್ಲ. ೧೨ ಜನರನ್ನು ಹೈಕೋರ್ಟ್ ಆದೇಶದ ಮೇಲೆ, ಸರ್ಕಾರದ ಅಡ್ವೈಸರಿ ಬೋರ್ಡಿನ ತೀರ್ಮಾನದ ಮೆಲೆ ೬ ಜನರನ್ನು ಬಿಡುಗಡೆ ಮಾಡಿದ್ದೇವೆ. ಈ ದೃಷ್ಟಿಯಲ್ಲಿ ನೋಡುವುದಾದರೆ ೨೯ ಜನ ಗೂಂಡಾಗಳು, ಇಬ್ಬರು ಬೂಟ್ ಲೆಗ್ಗರ್ಸ್, ೭ ಮಂದಿ ಗ್ಯಾಂಬ್ಲರ್ಸ್, ಇಬ್ಬರು ಸ್ಲಂ ಗ್ಯಾಂಬ್ಲರ್ಸ್, ಇಬ್ಬರು ಕಳ್ಳಬಟ್ಟಿಗೆ ಪ್ರೋತ್ಸಾಹಿಸಿದವರು ಹೀಗೆ ಒಟ್ಟು ೪೨ ಜನರನ್ನು ಅರೆಸ್ಟ್ ಮಾಡಲಾಗಿತ್ತು. ಹೈಕೋರ್ಟ್ ಆದೇಶ ಆದಮೇಲೆ ಎಷ್ಟು ಜನರನ್ನು ಮಾಡಿದ್ದೀರಿ ಮತ್ತು ಹೈಕೋರ್ಟ್ ಆರ್ಡರ್ ಬರುವುದಕ್ಕೆ ಮುಂಚೆ ಎಷ್ಟು ಜನರನ್ನು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿದ್ದಾರೆ. ಆ ವಿವರವನ್ನು ತರಿಸಿ ಕೊಡುತ್ತೇನೆ. ಒಂದಲ್ಲ ಒಂದು ಕಾರಣಕ್ಕೋಸ್ಕರ ಸಮಾಜಘಾತುಕ ಕೆಲಸ ಮಾಡತಕ್ಕವರು ತಪ್ಪಿಸಿ ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದಕ್ಕೆ ತಕ್ಕಂತೆ ಒಳ್ಳೆಯ ವಕೀಲರು ಇರುತ್ತಾರೆ. ಮನುಷ್ಯ ತಪ್ಪು ಮಾಡಿದ್ದರೂ ತಪ್ಪು ಮಾಡಿಲ್ಲವೆಂದು ವಾದ ಮಾಡುತ್ತಾನೆ. ಆದ್ದರಿಂದ ಸಮಾಜದಲ್ಲಿ ಜಿಲ್ಲಾ ರೀತಿಯ ಗೂಂಡಾಗಳನ್ನು ಪ್ರೋತ್ಸಾಹಿಸತಕ್ಕ ಜನ ಬರೀ ಪೊಲೀಸರು ಅಥವಾ ಸರ್ಕಾರ ಅಲ್ಲ. ಸ್ವಲ್ಪಮಟ್ಟಿಗೆ ಸಮಾಜದಲ್ಲಿ ಯಾವ ರೀತಿ ಜನ ಇದ್ದಾರೆ ಆ ರೀತಿ ಇಲ್ಲಿಯೂ ಹುಟ್ಟಿಕೊಳ್ಳುತ್ತಾರೆ. ಈ ಕಾಯಿದೆ ಮಾಡುವುದರ ಮೂಲಕ ಜನರಿಗೆ ಏನು ಆನಾನುಕೂಲವಾಗುತ್ತಿದೆ ಅದನ್ನು ತಪ್ಪಿಸಿ ಅವರಿಗೆ ನ್ಯಾಯವನ್ನು, ಶಾಂತಿ ಸಮಾಧಾನವನ್ನು ತಂದು ಜನಜೀವನ ತೃಪ್ತಿಯಿಂದ ನಡೆಯಲ್ಲಿ ಎಂದು ತಂದಿದ್ದೇವೆ. ಇದನ್ನು ತರುವುದರ ಮೂಲಕ ಪಕ್ಷದಲ್ಲಿ ವಿರೋಧವಾಗಿರತಕ್ಕವರಿಗೆ ಗೂಂಡಾಗಿರಿ ಕಾಯಿದೆಯಲ್ಲಿ ಹಾಕಬೇಕೆಂದು ಅಲ್ಲ. ಹಾಗಿದ್ದರೆ ಪ್ರತಿನಿತ್ಯ ಒಬ್ಬೊಬ್ಬರನ್ನು ತೆಗೆದುಕೊಂಡು ಹೋಗಿ

ಈ ಕಾಯಿದೆ ಪ್ರಕಾರ ಶಿಕ್ಷೆ ಮಾಡಬಹುದಾಗಿತ್ತು, ತೊಂದರೆಗೆ ಈಡುಮಾಡಬಹುದಾಗಿತ್ತು. ಆದರೆ ಆ ಕೆಲಸವನ್ನು ನಾನು ಮಾಡಿಲ್ಲವೆಂಬುದು ಅಂಕಿಅಂಶಗಳಿಂದ ಅರ್ಥವಾಗುತ್ತದೆ. ಈ ಕಾಯಿದೆಯನ್ನು ದುರುಪಯೋಗ ಮಾಡಿಕೊಳ್ಳುತ್ತಾರೆಂಬ ಭಯ ಕೂಡ ಇಲ್ಲವೆಂಬುದು ಅಂಕಿಅಂಶಗಳಿಂದ ಅರ್ಥವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಮಾಡಿರಲಿಕ್ಕೆ ಇಲ್ಲ. ಕಾನೂನು ಇದ್ದರೆ ಆ ಮೇಲೆ ಯಾರಾದರೂ ಮಾಡಬಹುದಲ್ಲ.

ಶ್ರೀ ಬಿ. ರಾಚಯ್ಯ.—ನಾನು ಇದುವರೆಗೆ ಅಸಮಧಾನಗೊಳ್ಳಬೇಕಾಗಿಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ನಿಮ್ಮೊಬ್ಬರ ಪ್ರಶ್ನೆ ಅಲ್ಲ. ಕಾನೂನು ಮಾಡಿದರೆ ಅದು ಶಾಶ್ವತವಾಗಿ ಇರತಕ್ಕದ್ದು. ನಾವು ಎಲ್ಲಿಯವರೆಗೆ ಒಪ್ಪಿಕೊಳ್ಳುತ್ತೇವೆ ಅಲ್ಲಿಯವರೆಗೆ ಇರತಕ್ಕದ್ದು. ಕಾನೂನು ಎಷ್ಟೇ ಒಳ್ಳೆಯದಿದ್ದರೂ ಅದು ಉಪಯೋಗ ಮಾಡುವವರ ಕೈಯಲ್ಲಿದೆ. ಕೆಟ್ಟ ರೀತಿಯಿಂದ ಮಾಡಿದರೆ ಕೆಟ್ಟದಾಗುತ್ತದೆ, ಒಳ್ಳೆಯ ರೀತಿಯಿಂದ ಮಾಡಿದರೆ ಒಳ್ಳೆಯದಾಗುತ್ತದೆ.

೩-೦೦ ಪಿ. ಎಂ.

ಶ್ರೀ ಎಂ. ಎಸ್. ಕೃಷ್ಣನ್.—ಪಾರ್ಲಿಮೆಂಟಿನಲ್ಲಿ ಈ ತರಹ ಸಮಸ್ಯೆ ಬಂದಾಗ ನೆಹರೂ ಅವರು ಏನು ಹೇಳಿದರು ಎಂದರೆ, ಈ ತರಹ ಆಕ್ಟ್ ತರುವುದಕ್ಕೆ ಪ್ರಯತ್ನ ಪಟ್ಟಾಗ, ನಾನಿರುವವರೆಗೂ ಸರಿಯಾಗಿರುತ್ತದೆ ಎಂದು ಅವರು ಹೇಳಿದರು. ನೀವು ಹೋದಮೇಲೆ ಏನಾಗುತ್ತದೋ ಗೊತ್ತಿಲ್ಲ ಎಂದು ಎಲ್ಲರೂ ಅಭಿಪ್ರಾಯ ಪಟ್ಟಾಗ ನಾವು ಯಾವಾಗಲೂ ದೂರದೃಷ್ಟಿ ಇಟ್ಟುಕೊಂಡು ಕಾನೂನುಗಳನ್ನು ಮಾಡಬೇಕು, ಈ ಕಾನೂನನ್ನು ಮಾಡುವುದು ಬೇಡ ಎಂದು ಹಿದ್ದುಪಡಿಯನ್ನು ತರದೆ ನಿಲ್ಲಿಸಿದರು. ಪಬ್ಲಿಕ್ಯುಲರ್ ಆಗಿ ಗೂಂಡಾಗಳ ಬಗ್ಗೆ ಹೇಳುತ್ತಾ, ಈಗಿರುವ ಕಾನೂನನ್ನು ಸರಿಯಾಗಿ ಉಪಯೋಗಿಸಿದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಎಂದು ಅವರು ಹೇಳಿದರು. ಮಾನ್ಯ ಮಂತ್ರಿಗಳು ಹೇಳುವುದು ದೊಡ್ಡ ಮಾತು. ಒಳ್ಳೆಯದು. ಆದರೆ ದುರುಪಯೋಗ ಪಡಿಸಿಕೊಳ್ಳುತ್ತಾರಲ್ಲ ಏನು ಮಾಡುವುದು ಆಗ?

ಶ್ರೀ ಬಿ. ರಾಚಯ್ಯ.—ನಾನಿರುವವರೆಗಾದರೂ ಸಂಪೂರ್ಣವಾಗಿ ಈ ಕಾನೂನನ್ನು ಜಾರಿಗೆ ಕೊಡಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಳೆ ನಿಮಗೆ ಬೇರೆ ಪೋರ್ಟ್‌ಫೋಲಿಯೊ ಬಂದರೆ ಏನು ಮಾಡುವುದು? ಏನಾಗುತ್ತದೋ ಯಾರಿಗೆ ಗೊತ್ತು? ಮುಂದಿನ ದಿನವೇ ಅಮೆಂಡ್‌ಮೆಂಟ್ ತರುವುದಕ್ಕೆ ಸಾಧ್ಯವೆ?

ಶ್ರೀ ಬಿ. ರಾಚಯ್ಯ.—ಶ್ರೀನಿವಾಸ್ ಅವರು ಶಿಖಂಡಿ ಕೈಯಲ್ಲಿ ಕಾಯಿದೆ ಕೊಟ್ಟಿದ್ದೀರಿ, ಅದನ್ನು ಜಾರಿಗೆ ತರುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಸಮಾಜದಲ್ಲಿ ಬಹಳ ಜನರಿಗೆ ತೊಂದರೆಯಾಗುವುದನ್ನು ತಪ್ಪಿಸಬೇಕು ಎಂದು ಕಾನೂನಿನಲ್ಲಿ ಏನೇನು ಅಡ್ಡಿಗಳಿವೆ ಅದನ್ನು ತಪ್ಪಿಸಿ ಒಳ್ಳೆಯದು ಮಾಡಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಈ ಕಾನೂನು ಹೊಸದಾಗಿ ತಂದಿಲ್ಲ. ಕಾಫಿ ಪೇಸ್ಟ್ ಮತ್ತು ನ್ಯಾಷನಲ್ ಸೆಕ್ಯೂರಿಟಿ ಆಕ್ಟ್‌ನಲ್ಲೇ ಇದೆ. ಕಾಯಿದೆ ಮುಖಾಂತರ ಹೈಕೋರ್ಟಿಗೆ ತೆಗೆದುಕೊಂಡು ಹೋದಾಗ ಹೈಕೋರ್ಟಿನಲ್ಲಿ ಹೆಚ್ಚಿಗೆ ಒಪ್ಪಿಗೆಯಾದರೂ ಒಂದೆರಡು ಲೋಪದೋಷಗಳಿಂದ ವಜಾ ಮಾಡುವ ಸನ್ನಿವೇಶ ಬರುವ ಬದಲು ತಪ್ಪುಗಳನ್ನು ಸರಿಪಡಿಸಿ ಸಮಾಜಘಾತುಕರಿಗೆ ಕಾಯಿದೆ ಪ್ರಕಾರ ಶಿಕ್ಷೆ ವಿಧಿಸುವುದಕ್ಕೆ ಆಜ್ಞೆ ಮಾಡಲಿ ಎಂದು ತಂದಿದ್ದೇವೆ. ಈ ಕಾಯಿದೆ ಮುಖಾಂತರ ವಿರೋಧಪಕ್ಷದಲ್ಲಿರತಕ್ಕವರನ್ನು ಮತ್ತು ಆಪರ ಸ್ನೇಹಿತರಾಗಿರತಕ್ಕವರನ್ನು ಹಿಡಿದು ಬಂಧನದಲ್ಲಿಡಬೇಕು, ತೊಂದರೆ ಕೊಡಬೇಕು ಎಂಬ ದುರುದ್ದೇಶ ನಿಜವಾಗಿ ಇಲ್ಲ. ಈ ತರಹ ಮಾಡಬೇಕೆಂದಿದ್ದರೆ ಅನೇಕ ಜನರನ್ನು ಒಳಗಡೆ ಹಾಕಬಹುದಾಗಿತ್ತು.

ಶ್ರೀ ಆರ್. ಎನ್. ನಾಯಕ್.—ಹೇಗೆ ಹಾಕುತ್ತೀರಿ?

ಶ್ರೀ ಕೆ. ಪೆಚ್. ಶ್ರೀನಿವಾಸ್.—ನಾವು ಯಾರೂ ಚರ್ಚೆಯ ಕಾಲದಲ್ಲಿ ವೈಯಕ್ತಿಕವಾಗಿ ಸಮುಗೆ ತೊಂದರೆ ಕೊಡುವುದಕ್ಕೋಸ್ಕರ ಈ ಕಾನೂನು ತಂದಿದ್ದೀರಿ ಎಂದು ಹೇಳಲೇ ಇಲ್ಲ. ಸಾಧ್ಯತೆ ಸಾಧ್ಯತೆಯ ಬಗ್ಗೆ ಪ್ರಾಪ್ತನಾಡಬೇಕಾದರೆ ಇಂಥ ಒಂದು ಕಾನೂನನ್ನು ಅನಾಮತ್ತಾಗಿ ಇಟ್ಟರೆ ಯಾರಾದರೂ ಹೇಗೆ ದುರುಪಯೋಗಪಡಿಸಿಕೊಳ್ಳುವುದಕ್ಕೆ ಸಾಧ್ಯ ಎಂದು ಹೇಳಿದ್ದೀವಿಯೇ ವಿನಹ

ನಮಗೆ ತೊಂದರೆ ಕೊಡುವುದಕ್ಕೆ ನೀವು ತಂದಿದ್ದೀರಿ ಎಂದು ಹೇಳಿಲ್ಲ. ನನ್ನ ಮೂಲಭೂತವಾದ ಆಪಾದನೆ ಏನು ಎಂದರೆ ನಿಮಗೆ ಯಾವ ಖಾತೆ ಕೊಟ್ಟರೂ ಏನೂ ಪ್ರಯೋಜನವಿಲ್ಲ ಎಂಬುದು. ಈ ಕಾನೂನನ್ನು ಇಟ್ಟುಕೊಂಡೂ ಏನೇನೂ ನೀವು ಮಾಡಿಲ್ಲ. ಹೈಕೋರ್ಟಿನವರು ಬಿಡುಗಡೆ ಮಾಡಿದ್ದು ಮೂರು ನಾಲ್ಕು ಜನರನ್ನು. ಇನ್ನು ೧೫–೨೦ ಜನರನ್ನು ನೀವೇ ಬಿಡುಗಡೆ ಮಾಡಿದ್ದೀರಿ. ಇಡೀ ರಾಜ್ಯದಲ್ಲಿ ನಿಮಗೆ ಸಿಕ್ಕಿದ್ದೇ ೨೬ ಗೂಂಡಾಗಳು ಎಂದರೆ, ನಿಮ್ಮ ಕೈಯಲ್ಲಿ ಹರಿಯದೇ ಇದ್ದ ಮೇಲೆ ನಿಮಗೆ ಕಾನೂನು ಏತಕ್ಕೆ ಎಂದು ಕೇಳಿದ್ದೇನೆ. ನಮ್ಮನ್ನು ನಾಲ್ಕು ಜನರನ್ನು ಒಳಗೆ ಹಾಕಿದ್ದರೂ ಏನೋ ಕೆಲಸ ಮಾಡಿದ್ದೀರಿ ಎಂದುಕೊಳ್ಳುತ್ತಿದ್ದೆವು. ಏನೋ ನಮ್ಮ ಗುರುತು ಹಿಡಿಯುವುದು ಮರೆತುಹೋಯಿತು. ತಪ್ಪಾಯಿತು ಎಂದು ಹೇಳಬಹುದಾಗಿತ್ತು. ನೀವು ಯಾರನ್ನೂ ಹಿಡಿದು ಒಳಗೆ ಹಾಕುವುದಿಲ್ಲ. ಅಂದಮೇಲೆ ನಿಮಗೆ ಕಾನೂನು ಏತಕ್ಕೆ ಬೇಕು? ''ಐವರಂಕಿ ಗರ್ವಮೂ ಲೇದು, ವಿದ್ಯೆಯೂ ಲೇದು'' ಎಂದು ಹೇಳಿದಹಾಗೆ ಆನ್ಯಾಯವೂ ಮಾಡುತ್ತಿಲ್ಲ, ಜನರಿಗೆ ನ್ಯಾಯವನ್ನೂ ಮಾಡುತ್ತಿಲ್ಲ. ೧೦೦ ಜನ ಗೂಂಡಾಗಳನ್ನು ಹಿಡಿದು ಒಳಗೆ ಹಾಕಿ ೧೦–೧೫ ಜನರನ್ನು ಸಂಭಾವಿತರು ಎಂದು ಬಿಟ್ಟಿದ್ದರೂ ಪರ್ವಾಗಿರಲಿಲ್ಲ. ಗೂಂಡಾಗಳನ್ನು ಹಿಡಿದು ಒಳಗೆ ಹಾಕುತ್ತಿಲ್ಲ. ಹಾಗಿದ್ದರೆ ನಿಮಗೆ ಕಾನೂನು ಏತಕ್ಕೆ ಬೇಕು?

ಶ್ರೀ ಬಿ. ರಾಚಯ್ಯ.—ಒಂದಲ್ಲ ಒಂದು ಕಾರಣಕ್ಕೆ ಅವರನ್ನು ಈಚೆಗೆ ಬಿಟ್ಟಿದ್ದಾರೆ. ಹೈಕೋರ್ಟಿನಲ್ಲಿ ಎಲ್ಲ ಕಾರಣಗಳು ಸರಿಯಾಗಿದ್ದರೆ ಮಾತ್ರ ಆಪ್ರೂವ್ ಮಾಡುತ್ತೇವೆಂದು ಹೇಳಿದ್ದರಿಂದ ಒಂದಲ್ಲ ಒಂದು ಕಾರಣದಿಂದ ಅವರು ಕೇಸುಗಳನ್ನು ವಜಾ ಮಾಡುತ್ತಾ ಇದ್ದುದರಿಂದ ಸ್ವಲ್ಪ ಅಧೈರ್ಯ ಬಂತು. ಕಾನೂನು ಜಾರಿ ಮಾಡುವುದಕ್ಕಾಗಲಿಲ್ಲ. ಆದ್ದರಿಂದ ಈಗ ಕಾಫಿಪೋಸಾದಲ್ಲಿ ಮತ್ತು ನ್ಯಾಷನಲ್ ಸೆಕ್ಯೂರಿಟಿ ಆಕ್ಟ್‌ನಲ್ಲಿ ಇರತಕ್ಕ ಪ್ರಾವಿಷನ್ ಅನ್ನೇ ಇದರಲ್ಲಿ ಇಂಟ್ರೊಡ್ಯೂಸ್ ಮಾಡಿದ್ದೇವೆ. ಈ ರೀತಿ ಮಾಡುವುದರಿಂದ ಸ್ವಲ್ಪವಾಟ್ಟಿಗೆ ಕ್ರಮ ತೆಗೆದುಕೊಳ್ಳಲು ಧೈರ್ಯ ಬರುತ್ತದೆ. ಹೆಚ್ಚಾಗಿ ಕ್ರಮ ತೆಗೆದುಕೊಳ್ಳಲು ಅವಕಾಶವಾಗುತ್ತದೆ ಎಂದು ಮಾಡಿದ್ದೇವೆ. ಇದನ್ನು ಒಬ್ಬ ಸಬ್–ಇನ್‌ಸ್ಪೆಕ್ಟರ್ ಕೈಯಲ್ಲಾಗಲೀ ಅಥವಾ ಇನ್‌ಸ್ಪೆಕ್ಟರ್ ಕೈಯಲ್ಲಾಗಲೀ ಕೊಡುವುದಿಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟ್ ಕೈಯಲ್ಲಿ ಕೊಡುತ್ತಿದ್ದೇವೆ. ಮತ್ತು ಬೆಂಗಳೂರು ನಗರದ ಕಮಿಷನರ್ ಅವರ ಕೈಯಲ್ಲಿ ಕೊಡುತ್ತಿದ್ದೇವೆ. ಇತ್ತೀಚಿನ ದಿನಗಳಲ್ಲಿ ಕ್ರೈಮ್‌ಗಳು ಹೆಚ್ಚಾಗುತ್ತಿವೆ ಎಂದು ಶ್ರೀನಿವಾಸ್ ಅವರು ಉಲ್ಲೇಖಿಸಿದರು. ಅದು ನಿಜ. ಇವರೆಲ್ಲರೂ ಹೊರಗಡೆ ಇದ್ದಾಗ ಸ್ವಾಭಾವಿಕವಾಗಿ ಆಗಿಯೇ ಆಗುತ್ತದೆ.

ಆದ್ದರಿಂದ ಇದನ್ನು ತಡೆಗಟ್ಟುವುದಕ್ಕೆ ಇದು ಒಂದು ಕಾರಣವಾಗಬಹುದು. ಆದರೆ ಕ್ರಿಮಿನಲ್ ಸೆಕ್ಷನ್ ೧೫೧ರ ಪ್ರಕಾರ ಅವರನ್ನು ಕಸ್ಟಡಿಗೆ ತೆಗೆದುಕೊಳ್ಳಬಹುದು. ೨೪ ಗಂಟೆಗಳವರೆಗೆ ಇಟ್ಟುಕೊಂಡು ಮುಂದಿನ ದಿವಸ ಅವರನ್ನು ಮ್ಯಾಜಿಸ್ಟ್ರೇಟರ್ ಮುಂದೆ ಹಾಜರುಪಡಿಸಿ ಜ್ಯುಡಿಷಿಯಲ್ ಕಸ್ಟಡಿಗೆ ಒಪ್ಪಿಸಬಹುದು. ಅದನ್ನು ಬಿಟ್ಟರೆ ೧೧೦,೧೦೭ ಹಾಗೂ ೧೦೭ನೇ ಸೆಕ್ಷನ್ ಪ್ರಕಾರ ಕೂಡ ಇಂತಹ ಪಸಾಹತುಗಾರರನ್ನು ಕಸ್ಟಡಿಗೆ ತೆಗೆದುಕೊಂಡು ನಂತರ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು. ಈ ರೀತಿಯ ಕಾಯಿದೆಗಳೂ ಇವೆ. ಹೊಸ ಹೊಸದಾಗಿ ತಪ್ಪುಗಳನ್ನು ಮಾಡುತ್ತಿದ್ದಾರೆ. ಅದಕ್ಕನುಗುಣವಾಗಿ ನಾವೂ ಕೂಡ ಯೋಚನೆ ಮಾಡದಿದ್ದರೆ ಮತ್ತು ಇಂತಹ ಕಾಯಿದೆಗಳನ್ನು ಜಾರಿಗೆ ತರದಿದ್ದರೆ ತೊಂದರೆಯಾಗುತ್ತದೆ. ಆದ್ದರಿಂದಲೇ ಇಂತಹ ಕಾನೂನುಗಳನ್ನು ಜಾರಿಗೆ ತಂದು ಇಂತಹ ದುಷ್ಟ ಜನಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಂಡರೆ ಒಳಿತು. ಯಾವುದೇ ಒಂದೇ ಒಂದು ಕಾರಣಕ್ಕೋಸ್ಕರ ವಜಾ ಮಾಡುತ್ತಿದ್ದರು. ಆದರೆ ಒಂದೇ ಕಾರಣ ಇದ್ದರೂ ಅಂತಹವರನ್ನು ಬಿಡುಗಡೆ ಮಾಡಬಾರದು ಎಂಬುವಂತಹ ತಿದ್ದುಪಡಿಯನ್ನು ಇದರಲ್ಲಿ ತಂದಿದ್ದೇವೆ. ಇರುವಂತಹ ಎಲ್ಲಾ ಕಾಯಿದೆಯನ್ನು ಜಾರಿಗೆ ತರುವುದರ ಮೂಲಕ ಇಂತಹ ಸಮಾಜಘಾತುಕ ಶಕ್ತಿಗಳನ್ನು ದಮನಮಾಡುವುದಕ್ಕೆ ಏನೇನು ಅವಶ್ಯಕವಾಗಿ ಮಾಡಬೇಕೋ ಆ ರೀತಿ ಎಲ್ಲ ಕಾನೂನುಗಳನ್ನು ತರುತ್ತಿದ್ದೇವೆ. ಆದ್ದರಿಂದ ಇದಕ್ಕೆ ಮಾನ್ಯ ಸಭೆ ತನ್ನ ಒಪ್ಪಿಗೆಯನ್ನು ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾವುದೇ ಒಂದು ಕಾರಣ ಇದ್ದರೂ ಅದನ್ನು ಒಪ್ಪಬೇಕು ಅಂತ ಹೇಳುವುದರಿಂದ ತಮ್ಮ ಉದ್ದೇಶ ಸಾಧನೆಯಾಗುವುದಿಲ್ಲ. ಕಾರಣ ಕೂಡ ಬಹಳಷ್ಟು ವೇಗ ಆಗಿದೆ. ಪುಟ ೬ರಲ್ಲಿ ೬(ಎ)ಗೆ ತಿದ್ದುಪಡಿಯನ್ನು ತರುತ್ತಿದ್ದೀರಿ. ಅದು ಕಾರಣ ಇಲ್ಲದಿದ್ದರೂ ಕಾರಣ ಅಂತ ಪರಿಗಣಿಸಬೇಕು, ಆ ತರಹದ ಕಾನೂನು ಇದೆ. Non cognisance ರೀಸನ್ಸ್ ಇದ್ದರೂ non-existent ರೀಸನ್ಸ್ ಎಂಬುದಾಗಿ ತಿಳಿದುಕೊಳ್ಳಬೇಕು ಎಂಬ ಅರ್ಥ ಬರುತ್ತದೆ.

ಅದರ ಪ್ರೊಟೆಕ್ಷನನ್ನು ತಾವು ತೆಗೆದುಕೊಂಡಿದ್ದೀರಿ. ವೇಗ್ ಆಗಿ ಇದ್ದರೂ ವೇಗ್ ಅಲ್ಲ ಅಂತ ತಿಳಿದು ಕೊಳ್ಳಬೇಕು, ಇಟ್ ರಿಲೆವೆಂಟ್ ಆಗಿದ್ದರೂ ಇಟ್ ಈಸ್ ರಿಲೆವೆಂಟ್ ಅಂತ ತಿಳಿದುಕೊಳ್ಳಬೇಕು, ಮನುಷ್ಯನಿಗೆ ಸಂಬಂಧಪಟ್ಟ ಒಂದು ಆಪಾದನೆ ಇಲ್ಲದಿದ್ದರೂ ಆ ಮನುಷ್ಯನಿಗೆ ಸಂಬಂಧಪಟ್ಟ ಆಪಾದನೆ ಅಂತ ತಿಳಿದುಕೊಳ್ಳಬೇಕು ಅಂತ ಅರ್ಥ ಬರುತ್ತದೆ. ಇದು ನನಗೆ ಅರ್ಥವಾಗಲಿಲ್ಲ. ಮೊದಲ ಕ್ಲಾಸ್ ಏನಿದೆ ಅದನ್ನು ಇಟ್ಟುಕೊಳ್ಳಿ.

You have said :—"Such order shall not be deemed to be invalid or inoperative merely because one or some of the grounds is or are,–

(i) Vague;

(ii) non-existent;

(iii) non-relevant;

(iv) not connected or not proximately connected with such person, (v) invalid for any other reason what soever:"

ಏನು ಸಂಬಂಧ ಇಲ್ಲದಿದ್ದರೂ, ಯಾವುದೇ ಆಪಾದನೆ ಇಲ್ಲದಿದ್ದರೂ, ಕೂಡ ಅದನ್ನು ಸಂಬಂಧ ಇದೆ, ಆಪಾದನೆಯನ್ನು ಒಪ್ಪಿಕೊಳ್ಳಬೇಕು ಇದರ ಪ್ರಕಾರ. ಇದರಿಂದ ದೊಡ್ಡ ಅನಾಹುತಕ್ಕೆ ಕಾರಣವಾಗ ಬಹುದು. ತಿದ್ದುಪಡಿಯನ್ನು ಮಾಡತಕ್ಕಂತಹ ಆಲೋಚನೆ ಮಾಡಿರತಕ್ಕಂತಹದ್ದು ಒಳ್ಳೆಯದು. ಸೆಕ್ಷನ್ ೬ ಏನಿದೆ ಅದು ಸರಿಯಾಗಿದೆ. ಆದರೆ ಸೆಕ್ಷನ್ ೬(ಎ) ಏನಿದೆ ಅದರಿಂದ ಬಹಳ ಅನಾಹುತವಾಗ ಬಹುದು. ಪ್ರಕರಣಕ್ಕೆ ಕಾರಣಕರ್ತರಾಗಿಲ್ಲದಿದ್ದರೂ ಅಂತಹವರನ್ನು ಬಂಧಿಸಬಹುದು. ಇಟ್ ಕ್ರಿಯೇಟ್ಸ್ ಲಾಟ್ ಆಫ್ ಪ್ರಾಬ್ಲಂ. ಅದನ್ನು ಆಲೋಚನೆ ಮಾಡಿ. ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಬೇಕಾದರೂ ಪೋಲೀಸ್‌ನವರು ಮೊದಲು ಪರದಿ ಬರಬೇಕು They can book in a create lot of problems; ಪೋಲೀಸಿನವರ ಪರದಿ ಇಲ್ಲದಿದ್ದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಯಾವ ಉಕ್ಕುಂನ್ನು ಮಾಡುತ್ತಾನೆ ? ಸಾರಾಸಗಟು ಇದನ್ನು ದುರುಪಯೋಗ ಪಡಿಸತಕ್ಕಂತಹ ಒಂದು ಅಸ್ತ್ರವನ್ನು ಪೋಲೀಸ್ ನವರ ಕೈಗೆ ಕೊಡುತ್ತಿದ್ದೀರಿ. ಇದನ್ನು ಯಾವ ಜಿಲ್ಲಾಧಿಕಾರಿ ಹಾಗೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇಟ್ಟುಕೊಳ್ಳುವುದಿಲ್ಲ. ಸೆಕ್ಷನ್ ೬(೧)(ಎ) ೧ ರಿಂದ ೪ರವರೆಗೆ ಏನು ಇದೆ, ಅದನ್ನು ತಿದ್ದುಪಡಿ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಇದು ಬಹಳ ಅನಾಹುತಕ್ಕೆ ಕಾರಣವಾಗುತ್ತದೆ. ಆಥವಾ ಅದನ್ನು ತಾವು ಸ್ಪಷ್ಟೀಕರಣಗೊಳಿಸಬೇಕು. ಮೋರ್‌ದೆನ್ ಒಂದು ಗ್ರೌಂಡ್ಸ್ ಅಂತ ಇರುವುದು ಒಳ್ಳೆಯದು. ಇನ್ನಿತರೆ ೨–೩ ಗ್ರೌಂಡ್ಸ್ ವೇಗ್ ಆಗಿದ್ದರೂ ಪರವಾಯಿಲ್ಲ.

If any one of the grounds is proved, it is valid. If it is like that, then only it is save, otherwise, it is not fool-proof.

ಶ್ರೀ ಬಿ. ರಾಚಯ್ಯ.—ಅವರು ಹೇಳಿದಮೇಲೆ ನನಗೂ ಡೌಟ್ ಬಂದಿದೆ. ಆದರೆ ಕಾಫಿ ಫೋನಾ ಆಕ್ಟ್‌ನಲ್ಲಿ ಹೇಗೆ ಇದೆಯೋ ಅದನ್ನು ಮಾಡಿದ್ದಾರೆ.

ಶ್ರೀ ಎಂ. ವಿರಪ್ಪ ಮೊಯಿಲಿ.—ನಿಮ್ಮದು ಸದುದ್ದೇಶ ಇದೆ. ಇದು ಮೊದಲೇ ಬರಬೇಕಾಗಿತ್ತು. ಯಾರು ಹೊರಗಡೆ ಬಂದರು ಅವರೇ ಹೆಚ್ಚು ಸತ್ತರು. ಗೂಂಡಾನ್ ತಮ್ಮ ತಮ್ಮಲ್ಲೇ ಹೊಡೆದಾಡಿಕೊಂಡು ಸತ್ತರು. ಇದು ಮೊದಲೇ ಬಂದಿದ್ದರೆ ಅವರನ್ನು ನಿವ್ವ ಸೇವ್ ಮಾಡಬಹುದಾಗಿತ್ತು. ತಮ್ಮ ಉದ್ದೇಶ ಇವತ್ತು ಸಫಲವಾಗಬೇಕು. ಇವತ್ತು ೬(ಎ) ಸಬ್‌ಕ್ಲಾಸ್ (೧) ಏನಿದೆ ಅದರಿಂದ ಸಫಲವಾಗುತ್ತದೆ. ಸಮಾಜದ ದೃಷ್ಟಿಯಿಂದ ವ್ಯಾಪಕವಾದ, ಸಮಗ್ರವಾದ ಕಾನೂನು ಮಾಡಿದರೆ ಅದು ಸಾಧ್ಯವಾಗುತ್ತದೆ. ತಾವು ಈಗ ಏನು ಮಾಡಬಹುದು ಎಂದರೆ even the third or fourth ground etc. they are not irrelevant. If this one charge is proved that is adequate. ಕಾಫಿ ಫೋನಾಕ್ಕೂ ಇದಕ್ಕೂ ಬಹಳ ವ್ಯತ್ಯಾಸ ಇದೆ. That has got a national objective. It has got a localised objective. ಮತ್ತೆ ಯಾವುದೇ ಉದ್ದೇಶದಿಂದ ಮಾಡಿದ್ದೀರೋ ಅದು ಸಫಲವಾಗು

ವುದಿಲ್ಲ. ಯಾವ ಕಾಂಟಿಸ್ಟ್‌ನಲ್ಲೂ ಅದನ್ನು ಸೇರಿಸುವುದಕ್ಕಾಗುವುದಿಲ್ಲ. Even the amendment may be struck down by the High Court and this may be grossly misused by the implementing authorities. ಇದನ್ನು ತಾವು ಪುನಃ ಆಲೋಚನೆ ಮಾಡಬೇಕು. ಇದನ್ನು ನಾಳೆ ತನ್ನಿ. By merely reproducing what was contained in the COFEPOSA will not adequately arm you to deal with the situation. It has got to arm you with certain weapons which weapons will have to be properly used. ಆಷ್ಟು ಸಾಧನೆ ಇಲ್ಲದೇ ಇದ್ದರೆ, ಬೈ ಮಿಯರ್ಲಿ ಇದನ್ನು ಹಾಕುವುದರಿಂದ ಸಂಪೂರ್ಣ ರಕ್ಷಣೆ ಏನು ಬರಬೇಕೋ ಅದು ಹೋಗಿಬಿಟ್ಟರೆ ಏನಾಗುತ್ತದೆಂದು ಆಲೋಚನೆ ಮಾಡಿ.

ಶ್ರೀ ಬಿ. ರಾಚಯ್ಯ.—ನ್ಯಾಷನಲ್ ಸೆಕ್ಯುರಿಟಿ ಆಕ್ಟ್‌ನಲ್ಲಿ ಈ ಒಂದು ಕ್ಲಾಸ್ ಇದೆ. COFEPOSA ರಲ್ಲೂ ಕೂಡಾ ಇದು ಇದೆ. ಆದುದರಿಂದ ಇದು omnipotent ಆಗಿರುವುದರಿಂದ ಯಾವುದಾದರೂ ಒಂದು ಗ್ರೌಂಡ್‌ನಲ್ಲಿ ಹೋದರೂ ಕೂಡಾ ಈ ಕಾಯ್ದೆಯಲ್ಲಿ ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಇಲ್ಲದೆ ಇರಲಿ ಎಂದು ಇದನ್ನು ತಂದಿದ್ದೇವೆ. ಈ ಕಾಯ್ದೆ ಮುಂದೆ ಮಿಸ್‌ಯೂಸ್ ಆಗುವುದು ಕಂಡುಬಂದರೆ ಮುಂದೆ ತಿದ್ದುಪಡಿಯನ್ನು ತರುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ,

''೧೯೮೭ನೇ ಇಸವಿಯ ಕರ್ನಾಟಕ ಕಳ್ಳಭಟ್ಟಿದಾರರು, ಔಷಧ ಅಪರಾಧಿಗಳು, ಜೂಜು ಕೋರರು, ಗೂಂಡಾಗಳು, ಅನೈತಿಕ ವ್ಯವಹಾರದ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ಎರಡರಿಂದ ನಾಲ್ಕರವರೆಗೆ

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ–''ಖಂಡ ಎರಡರಿಂದ ನಾಲ್ಕನೇ ಖಂಡಗಳು–ವಿಧೇಯಕದ ಅಂಗವಾಗಿರುತ್ತವೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(೨ರಿಂದ ೪ರವರೆಗಿನ ಖಂಡಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ.....

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ 'ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಪ್ರಸ್ತಾವವನ್ನು ಅಂಗೀಕರಿಸುವುದು.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗಳು ವಿಧೇಯಕದ ಅಂಗವಾದುವು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ರಾಚಯ್ಯ.—೧೯೮೭ನೇ ಇಸವಿಯ ಕರ್ನಾಟಕ ಕಳ್ಳಬಟ್ಟಿದಾರರು ಔಷಧ ಅಪರಾಧಿಗಳು ಜೂಜುಕೋರರು, ಗೂಂಡಾಗಳು, ಅನೈತಿಕ ಅಪರಾಧಿಗಳು, ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೭ನೇ ಇಸವಿಯ ಕರ್ನಾಟಕ ಕಳ್ಳಭಟ್ಟಿದಾರರು ಔಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ಅಪರಾಧಿಗಳು ಕೊಳಗೇರಿಗಳನ್ನು ವಶಪಡಿಸಿಕೊಳ್ಳುವವರ ಅಪಾಯಕಾರಿ ಚಟುವಟಿಕೆಗಳನ್ನು ಪ್ರತಿಬಂಧಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.
೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಕ.

## ಪರ್ಯಾಲೋಚನಾ ಪ್ರಸ್ತಾವ

ಶ್ರೀ ಅಬ್ದುಲ್ ನಜೀರ್‌ಸಾಬ್.—೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಗಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈಗಾಗಲೇ ನಮ್ಮ ಕೇಂದ್ರ ಸರ್ಕಾರ ಪಕ್ಷಾಂತರ ನಿಷೇಧ ಮಸೂದೆಯನ್ನು ಜಾರಿಗೆ ತಂದು ಅದು ಈಗಾಗಲೇ ಜಾರಿಯಲ್ಲಿದೆ. ಆ ಮಸೂದೆ ಲೋಕಸಭಾ ಸದಸ್ಯರುಗಳಿಗೆ ಹಾಗೂ ಶಾಸಕರುಗಳಿಗೆ ಅನ್ವಯವಾಗುತ್ತದೆ. ಆ ದಿಕ್ಕಿನಲ್ಲಿಯೇ ಸ್ಥಳೀಯ ಸಂಸ್ಥೆಗಳಾದ ಮುನಿಸಿಪಾಲಿಟಿಗಳು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಸದಸ್ಯರುಗಳು ಪಕ್ಷಾಂತರ ಮಾಡಬಾರದು ಎನ್ನುವ ಉದ್ದೇಶದಿಂದ ಆದ್ಯಾದೇಶವನ್ನು ಹೊರಡಿಸಲಾಗಿದೆ. ಅದನ್ನು ಈಗ ಮಸೂದೆಯ ರೂಪದಲ್ಲಿ ಇಟ್ಟಿದ್ದೇವೆ. ಲೋಕಸಭಾ ಸದಸ್ಯರುಗಳಿಗೆ ಅನ್ವಯವಾಗುವ ರೀತಿಯಲ್ಲಿಯೇ ಹೆಚ್ಚು ಕಡಿಮೆ ಎಲ್ಲಾ ನಿಯಮಗಳನ್ನು ಅಳವಡಿಸಲಾಗಿದೆ. ಒಂದು ಪಕ್ಷದ ಸದಸ್ಯರು ಮೂರನೇ ಒಂದು ಭಾಗದಷ್ಟು ಪಕ್ಷಾಂತರ ಮಾಡಿದರೆ ಅದು ಪಕ್ಷಾಂತರ ಆಗುವುದಿಲ್ಲ ಅದು ಆ ಪಕ್ಷದ ಒಂದು ಭಾಗವಾಗುತ್ತದೆನ್ನುವುದು ಸಂಸತ್ತಿನ ವಿಧೇಯಕದಲ್ಲಿದೆ. ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರುಗಳು ಇರುತ್ತಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಹೆಚ್ಚು ಸದಸ್ಯರುಗಳು ಇರುವುದಿಲ್ಲ. ಆದ್ದರಿಂದ ಶೇಕಡ ೫೦ರಷ್ಟು ಸದಸ್ಯರು ಪಕ್ಷಾಂತರ ಮಾಡಿದರೆ ಅದು ಪಕ್ಷಾಂತರ ಆಗುವುದಿಲ್ಲ. ಆ ಪಕ್ಷದ ಒಂದು ಭಾಗವಾಗುತ್ತದೆ. ಅಷ್ಟನ್ನು ಮಾತ್ರ ಇಲ್ಲಿ ಅಳವಡಿಸಲಾಗಿದೆ. ಸ್ವತಂತ್ರವಾಗಿ ಚುನಾಯಿತನಾದ ಒಬ್ಬ ಸದಸ್ಯನಿಗೂ ಸಹ ಪಕ್ಷಾಂತರ ನಿಷೇಧ ಮಸೂದೆ ಅನ್ವಯವಾಗುತ್ತದೆ. ನಾಮ ನಿರ್ದೇಶನ ಹೊಂದಿದವರಾಗಲೀ ಪಕ್ಷೇತರ ಅಭ್ಯರ್ಥಿಗಳಾಗಲೀ ಯಾವುದೇ ಒಂದು ಪಕ್ಷಕ್ಕೆ ಸೇರಿಕೊಳ್ಳಲು ಆರು ತಿಂಗಳುಗಳ ಕಾಲ ಕಾಲಾವಕಾಶ ಇರುತ್ತದೆ. ಆರು ತಿಂಗಳು ಆದಮೇಲೆ ಪಕ್ಷಾಂತರ ಮಾಡಿದರೆ ಆತ ಅನರ್ಹನಾಗುತ್ತಾನೆ ಎನ್ನುವ ಅಂಶಗಳನ್ನು ಅಳವಡಿಸಿ ಮಸೂದೆಯನ್ನು ತರಲಾಗಿದೆ. ಪಕ್ಷೇತರರು ಆದರೂ ಕೂಡ ಅವರು ಇಷ್ಟಬಂದ ಹಾಗೆ ಪಕ್ಷಗಳನ್ನು ಬದಲಾಯಿಸುವ ಹಾಗೆ ಇಲ್ಲ. ಯಾವುದೇ ಪಕ್ಷಕ್ಕೆ ಸೇರಬೇಕಾದರೆ ಆರು ತಿಂಗಳೊಳಗೆ ಸೇರಿಕೊಳ್ಳಬಹುದು. ಸ್ವತಂತ್ರವಾಗಿರುವುದು ಅಭಿಪ್ರಾಯ ಪಟ್ಟರೆ ಆರು ತಿಂಗಳಲ್ಲಿ ಒಪ್ಪಿಗೆ ಕೊಡಬೇಕೆಂದು ಇದೆ. ಇಷ್ಟು ಇದರಲ್ಲಿ ಇದೆ. ಇದಕ್ಕೆ ಸಭೆಯ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಎಲ್ಲಾ ಹೋಲ್‌ಸೇಲ್ ಆಗಿ ಆಗಬೇಕು. ರಿಟೈಲ್ ಆಗಿ ಅಲ್ಲ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ಈ ಒಂದು ಕಾನೂನನ್ನು ಮಾಡಬೇಕೆಂಬ ಉದ್ದೇಶದಿಂದ ಪಕ್ಷಾಂತರ ನಿಷೇಧ–ಈ ಒಂದು ಕಾನೂನು ಅನ್ವಯವಾಗತಕ್ಕಂಥಾದ್ದು. ಇಲ್ಲಿ ಮುನಿಸಿಪಾಲಿಟಿ, ಪುರಸಭೆಗಳಲ್ಲಿ ಇರತಕ್ಕಂಥ ಸದಸ್ಯರಿಗೆ ಸಂಬಂಧ ಬರುತ್ತದೆ. ಆಮೇಲೆ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಅದು ಮತ್ತು ಮುನಿಸಿಪಾಲಿಟಿಗಳ ಅಧಿನಿಯಮಗಳ ಪ್ರಕಾರ ಬರತಕ್ಕದ್ದು ಹಾಗೂ ಚುನಾಯಿತರಾದಂಥ ಅಥವಾ ನಾಮನಿರ್ದೇಶಿತ ಸದಸ್ಯರಿಗೆ ಸಂಬಂಧಪಟ್ಟಹಾಗೆ ಮಂಡಲ್ ಪಂಚಾಯಿತ್ ಮತ್ತು ಜಿಲ್ಲಾ ಪರಿಷತ್ತು. ಇಷ್ಟೊಂದು ಪುರಸಭೆಗಳಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಅಥವಾ ಪ್ರಾಧಿಕಾರಗಳಿಗೆ ಸಂಬಂಧಪಟ್ಟಿರತಕ್ಕಂಥ ಒಂದು ಕಾನೂನು. ಇವರ

† ಈ ಚಿಪ್ಪಿನ ಮಾನ್ಯ ಸದಸ್ಯರು ತಪ್ಪಿಗೆ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.